ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೧ ಜೂನ್, ೨೦೦೧ ಸಂಚಿಕೆ ೧೧

ಭಾರತೀಯ ಪ್ರಜಾಪ್ರಭುತ್ವದ ಹಿನ್ನೆಡೆಯಾಗಬಹುದೆ?

★

ಪುಸ್ತಕ ಸಂಸ್ಕೃತಿ ಉಳಿದೀತೆ?

★

ಮತಾಂಧ ತಾಲಿಬಾನ್ ಸಾಧಿಸಿದ್ದೇನು ?

★

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಂತರ್ಜಾತೀಯ ವಿವಾಹದ ಪ್ರತಿಮೆಗಳು

★

ಬೌದ್ಧ ಸಂಸ್ಕೃತಿಗಳಲ್ಲಿ ಮಹಿಳೆಯರ ಸ್ಥಾನಮಾನ

★

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೧ ಸಂಚಿಕೆ : ೧೧

ಜೂನ್ ೨೦೦೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :

ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.
ದೂರವಾಣಿ : ೦೮೨೩೬/೫೮೭೫೪

ಎಲ್ಲಕ್ಕಿಂತ ಮೊದಲು
ನನ್ನ ವಿಷದ ಹಲ್ಲುಗಳನ್ನು
ಕಿತ್ತುಬಿಡು
ನನ್ನ ಸಣ್ಣತನದ ರೆಕ್ಕೆ
ಆಕಾಶವನ್ನೇ ಗುಡಿಸುವಂತಿದ್ದರೆ
ಅದನ್ನು ಕತ್ತರಿಸಿ ಬಿಡು
ದುರಹಂಕಾರದ ಮೀನು
ಎಂದೆಣಿಸುವುದಾದರೆ
ದಡಕ್ಕೆ ತಂದು ಬಿಸಾಡು
ನನಗೂ ಸಾಕಾಗಿದೆ
ಈ ಯುದ್ಧ ಒಳಗೆ ಹೊರಗೆ
ಎಳೆದು ತಾ ನನ್ನನ್ನು
ನಿರ್ಮಲ ಬದುಕಿಗೆ.

–ಸವಿತಾ ನಾಗಭೂಷಣ

ಚಂದಾದಾರರಲ್ಲಿ ವಿನಂತಿ.
ಚಂದಾ ಕಳುಹಿಸಿರುವ ಓದುಗರಿಗೆ
ಕೃತಜ್ಞತೆಗಳು

– ಪ್ರಕಾಶಕರು

ಜನಪದ ಸಂಗತಿ..................

ಭಿಕ್ಷೆ ಬೇಡಿಕೊಂಡಿದ್ದರೂ ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿ ಇಡೀ ಸಮಾಜದ ಸಹಾನುಭೂತಿ ಮತ್ತು ಸಹಾಯವನ್ನು ಪಡೆದಿರುವ ನಾಗರತ್ನಳ ಸಂಗತಿ ವಿದ್ಯಾರ್ಥಿ ಸಮುದಾಯದಲ್ಲಿ ಯಾವ ಪ್ರತಿಕ್ರಿಯೆಯನ್ನು ಉಂಟುಮಾಡಿದೆಯೋ ಗೊತ್ತಿಲ್ಲ. ಪ್ರಾಚೀನ ಕಾಲದಿಂದಲೂ ವಿದ್ಯಾಭ್ಯಾಸಕ್ಕಾಗಿ ಅನೇಕ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿ ಮೇಧಾವಿಗಳಾದಂಥವರ ಅನೇಕ ಉದಾಹರಣೆಗಳು ವಿಶ್ವದ ಪ್ರತಿಯೊಂದು ರಾಷ್ಟ್ರದಲ್ಲಿ ಸಿಗುತ್ತವೆ; ನಮ್ಮ ಭಾರತದಲ್ಲಿಯಂತೂ ಅಂಥ ಉದಾಹರಣೆಗಳನ್ನು ಧಾರಾಳವಾಗಿ ಹೇಳುವುದನ್ನು ಕೇಳುವುದನ್ನು ನಾವು ನೋಡಿದ್ದೇವೆ. ಅಂಥ ಪ್ರತಿಯೊಬ್ಬ ವ್ಯಕ್ತಿಯ ಜೀವನದ ಅನುಭವಗಳನ್ನು ಸಂಗ್ರಹಿಸಿ ಪ್ರಕಟಿಸಿದಲ್ಲಿ ಅದೊಂದು ರೋಮಾಂಚಕಾರಿ ಕಥಾ ಸಂಗ್ರಹವಾಗುವುದರಲ್ಲಿ ಸಂದೇಹವಿಲ್ಲ. ಆದರೆ ಪ್ರಕಾಶಕ್ಕೆ ಬರದೆ ಬಡತನ ಮತ್ತು ದುಃಸ್ಥಿತಿಯಲ್ಲಿ ಇರುವ ಶ್ರದ್ಧಾಯುತ ವಿದ್ಯಾರ್ಥಿಗಳ ಸಂಖ್ಯೆ ಅಪಾರವಾಗಿದೆ. ಅಂಥವರಿಗೆಲ್ಲ ಸಹಾಯ ದೊರೆಯುವ ಬಗೆ ಹೇಗೆ ? ಈ ಕುರಿತು ಸಮಾಜ ಮತ್ತು ಸರ್ಕಾರ ಗಂಭೀರವಾಗಿ ಆಲೋಚಿಸುವ ಕಾಲ ಬಂದಿದೆ.

ಕರ್ನಾಟಕ ಸಾರಿಗೆ ಸಂಸ್ಥೆಯ ಸೇವಾ ಗುಣಮಟ್ಟವನ್ನು ಹೆಚ್ಚಿಸುವ ಬಗ್ಗೆ ಕೈಗೊಳ್ಳಲಾಗುತ್ತಿರುವ ಕ್ರಮಗಳನ್ನು ಕುರಿತು ಸಂಬಂಧಿಸಿದ ಮಂತ್ರಿವರ್ಯರಿಂದ ಹಾಗೂ ಸಂಸ್ಥೆಯ ನಿರ್ದೇಶಕರಿಂದ ಹೇಳಿಕೆಗಳು ಬರುತ್ತಲೇ ಇರುತ್ತವೆ; ಸಾರಿಗೆ ವ್ಯವಸ್ಥೆಯಲ್ಲಿ ಕಂಪ್ಯೂಟರ್‌ಗಳು ಈಗ ಕಂಡಕ್ಟರ್‌ಗಳ ಕೈಗಳಿಗೂ ಬಂದಿವೆ. ಬಸ್ ನಿಲ್ದಾಣಗಳ ನಿರ್ಮಾಣ ಮತ್ತು ಅವುಗಳ ಶುಚಿತ್ವ ಈ ನಿಟ್ಟಿನಲ್ಲೂ ಸಾಕಷ್ಟು ಪ್ರಗತಿ ಆಗುತ್ತಿದೆ. ಆದರೆ ಮುಖ್ಯವಾಗಿ ಒಂದು ಕೊರತೆ ಎದ್ದು ಕಾಣುತ್ತಿದೆ. ರಾಜಧಾನಿ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಬಸ್‌ಗಳ ಆಗಮನ ನಿರ್ಗಮನಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಆದರೆ ಅದು ಕೂಡ ಬಹಳ ಕಷ್ಟದಿಂದ. ಇನ್ನು ತಾಲ್ಲೂಕು ಮತ್ತು ಗ್ರಾಮಾಂತರ ಪ್ರದೇಶದ ಇತರ ಮುಖ್ಯ ಸ್ಥಳಗಳಲ್ಲಿ ಬಸ್‌ಗಳ ಸಂಚಾರದ ಸಮಯ ಗೊತ್ತಾಗುವುದೇ ಇಲ್ಲ. ದಿನನಿತ್ಯ ಪ್ರವಾಸದ ಅನುಭವವಿರುವವರಿಂದ ಬಸ್ ಸಮಯ ಕೇಳಿ ತಿಳಿದುಕೊಳ್ಳಬೇಕಾಗುತ್ತದೆ.

೮ ನೇ ಪುಟಕ್ಕೆ

ಭಾರತೀಯ ಪ್ರಜಾಪ್ರಭುತ್ವದ ಹಿನ್ನಡೆಯಾಗಬಹುದೆ?

ಇತ್ತೀಚೆಗೆ ನಡೆದ ಐದು ರಾಜ್ಯಗಳಲ್ಲಿಯ ಸಾರ್ವತ್ರಿಕ ಚುನಾವಣೆಯ ಫಲಿತಾಂಶಗಳು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ ಗಾಳಿ ಯಾವ ದಿಕ್ಕಿನತ್ತ ಬೀಸುತ್ತಿದೆ ಎಂದು ತೋರಿಸುತ್ತಿದೆ. ಐವತ್ತು ವರ್ಷಗಳಷ್ಟು ಪ್ರಬುದ್ಧವಾಗಿರುವ ನಮ್ಮ ದೇಶದ ಪ್ರಜಾಪ್ರಭುತ್ವ ಗಟ್ಟಿಯಾಗಿ ಬೆಳೆಯುವುದರ ಬದಲು ಒಳಗೊಳಗೆ ಗೆದ್ದಲು ಹತ್ತಿದ ಮರದಂತೆ ಟೊಳ್ಳಾಗಿ ಬೆಳೆಯುತ್ತಿರುವ ಸಂಕೇತಗಳು ಈ ಚುನಾವಣೆಯ ಫಲಿತಾಂಶದಲ್ಲಿ ಕಾಣುತ್ತಿವೆ.

ನಾವು ಸಂವಿಧಾನವನ್ನು ರಚಿಸಿಕೊಂಡಿದ್ದೇವೆ; ಪ್ರಪಂಚದಲ್ಲಿಯೇ ಅತಿ ದೊಡ್ಡ ಸಂವಿಧಾನವೂ ಅದಾಗಿದೆ. ಆದರೆ ಮನುಷ್ಯನ ಕುಟಿಲ ನೀತಿ, ಸ್ವಾರ್ಥ ಮುಂತಾದ ಹೇಯ ಸ್ವಭಾವಗಳ ಮುಂದೆ ಎಂಥ ಬೃಹತ್ ಸಂವಿಧಾನವೂ ನಿರರ್ಥಕವಾಗಬಹುದು. ಒಬ್ಬ ಚಿಂತಕ ಹೇಳಿರುವಂತೆ, "ಪ್ರಜಾಪ್ರಭುತ್ವ ಜನರ ಆಶೋತ್ತರಗಳನ್ನು ಪ್ರತಿನಿಧಿಸುತ್ತದೆಂಬುದೇನೋ ಅದ್ಭುತವಾದ ಸಂಗತಿ. ಆದರೆ ಜನರು ಏನು ಬಯಸುತ್ತಾರೆಂಬುದೇ ಪ್ರಜಾಪ್ರಭುತ್ವ ಕುರಿತಾದ ದೊಡ್ಡ ಭಯದ ಸಂಗತಿಯಾಗಿದೆ."

ಜಯಲಲಿತಾರವರ ಮೇಲೆ ನಲ್ವತಕ್ಕೂ ಹೆಚ್ಚು ಕೋರ್ಟ್ ಕೇಸುಗಳಿವೆ ಮತ್ತು ಕೆಲವುದರಲ್ಲಿ ಅವರಿಗೆ ಶಿಕ್ಷೆಯೂ ಆಗಿದೆ, ಜೈಲವಾಸವೂ ಆಗಿದೆ. ಈ ಎಲ್ಲ ಕೇಸುಗಳು ಹತ್ತಾರು ರೀತಿಯ ಕ್ರಿಮಿನಲ್ ಕೇಸುಗಳೇ ಆಗಿವೆ. ಅಂಥ ಒಬ್ಬ ವ್ಯಕ್ತಿ ಚುನಾವಣೆಯಲ್ಲಿ ಬಹುಮತದಲ್ಲಿ ಗೆದ್ದು ಬಂದು ಆ ರಾಜ್ಯದ ಮುಖ್ಯ ಮಂತ್ರಿಯಾಗಿದ್ದಾರೆ! ಈಗ ಅವರು ಮಾಡುತ್ತಿರುವುದೇನು? ತಮ್ಮ ವಿರುದ್ಧದ ಕೇಸುಗಳ ತನಿಖೆಗಳು ಮುಂದುವರಿಯದಂತೆ ನೋಡಿಕೊಳ್ಳುತ್ತಿದ್ದಾರೆ. ಜಯಲಲಿತಾರ ಆಯ್ಕೆಯು ಹತ್ತಾರು ಪ್ರಶ್ನೆಗಳನ್ನು ಉಂಟುಮಾಡಿದೆ. ಅವುಗಳಲ್ಲಿ ಪ್ರಮುಖವಾದುವು ಈ ರೀತಿ ಇವೆ:-

(೧) ಜೈಲುಶಿಕ್ಷೆ ಘೋಷಿತವಾಗಿ, ಈಗ ಅದರ ವಿರುದ್ಧ ತಡೆಯಾಜ್ಞೆಯನ್ನು ತಂದುಕೊಂಡಿರುವಂಥ ವ್ಯಕ್ತಿ, ಚುನಾವಣೆಗೆ ನಿಲ್ಲಬಹುದೆ?

(೨) ಒಂದೇ ರೀತಿಯ ಅನರ್ಹತೆ ಇರುವ ವ್ಯಕ್ತಿಗಳಿಗೆ, ಒಬ್ಬರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಅವಕಾಶ ದೊರೆತು ಇನ್ನೊಬ್ಬರಿಗೆ ಅವಕಾಶ ದೊರೆಯದೇ ಇರುವುದು, ಸರಿಯೇ?

(೩) ಬಹುಮತ ಪಡೆದ ಪಕ್ಷ ಸಂವಿಧಾನವನ್ನು ಮತ್ತು ನ್ಯಾಯಾಂಗವನ್ನು ತನ್ನ ಹಿತಕ್ಕೆ ಬಗ್ಗಿಸಿಕೊಳ್ಳಬಹುದೆ?

(೪) ಜಯಲಲಿತಾರ ಆಯ್ಕೆಯು ಸಂವಿಧಾನದ ಒಂದು ವಿಧಿಯನ್ನು

ಇನ್ನೊಂದು ವಿಧಿಗೆ ವಿರೋಧವಾಗಿಸುವಂಥ ಪರಿಸ್ಥಿತಿಯನ್ನು ಉಂಟುಮಾಡುತ್ತಿಲ್ಲವೇ?

(೫) ವಿಧಿ ೧೫೯ ರ ಪ್ರಕಾರ ರಾಜ್ಯಪಾಲರು ಸಂವಿಧಾನದ ಪಾವಿತ್ರ್ಯವನ್ನು ಕಾಪಾಡಿಕೊಂಡು ಬರುವುದಾಗಿ ಸ್ವೀಕರಿಸಿದ ಪ್ರತಿಜ್ಞೆಯು ಉಲ್ಲಂಘನೆಯಾಗಿಲ್ಲವೆ?

(೬) ವಿಧಿ ೧೬೧ ರ ಪ್ರಕಾರ ರಾಜ್ಯಪಾಲರು ಎಂಥದೇ ಅಪರಾಧಕ್ಕೆ ಒಳಗಾಗಿರುವ ವ್ಯಕ್ತಿಗೆ ಕ್ಷಮಾದಾನ ಮಾಡಬಹುದು ಅಥವಾ ಶಿಕ್ಷೆಯ ಅವಧಿಯನ್ನು ಕಡಿಮೆ ಮಾಡಬಹುದು. ಈ ವಿಧಿಯ ಲಾಭ ಪಡೆಯಲು ಮುಖ್ಯಮಂತ್ರಿ ಜಯಲಲಿತಾರು ತಮ್ಮ ಅಪರಾಧದ ಕ್ಷಮೆಗೆ ರಾಜ್ಯಪಾಲರಿಗೆ ಸಲಹೆ ಕೊಡುವುದಕ್ಕೆ ಉಪಯೋಗಿಸುವುದಿಲ್ಲವೆಂಬುದಕ್ಕೆ ಯಾವ ಭರವಸೆಯಿದೆ ಮತ್ತು ಆ ಸಲಹೆಯನ್ನು ರಾಜ್ಯಪಾಲರು ೧೬೩ ನೇ ವಿಧಿ ಪ್ರಕಾರ ಅಂಗೀಕರಿಸಬಹುದಲ್ಲವೆ?

(೭) ಈಗ ತಮಿಳುನಾಡಿನಲ್ಲಿ ಉದ್ಭವವಾಗಿರುವ ಸಂವಿಧಾನ ವಿರೋಧಿ ಬೆಳವಣಿಗೆಗಳನ್ನು ಪರಿಶೀಲಿಸಿ ರಾಷ್ಟ್ರಪತಿಯವರು ಅಲ್ಲಿಯ ಬಹುಮತದ ಸಂಗತಿಯನ್ನು ಬದಿಗಿಟ್ಟು ಅಲ್ಲಿ ರಾಷ್ಟ್ರಪತಿ ಆಡಳಿತವನ್ನು ಜಾರಿಗೆ ತರಲು ಮುಂದಾಗುವರೆ?

(೮) ಜನತೆಯ ತೀರ್ಮಾನವೇ ಅಂತಿಮ ತೀರ್ಮಾನವೆಂದಾದರೆ ಜಯಲಲಿತಾ ಪ್ರತಿ ಆರು ತಿಂಗಳ ಅವಧಿ ಮುಗಿದಾಕ್ಷಣ ಒಂದು ದಿನದ ಮಟ್ಟಿಗೆ ರಾಜೀನಾಮೆಕೊಟ್ಟು ಆ ಸ್ಥಾನಕ್ಕೆ ತಮ್ಮ ಕೈಗೊಂಬೆಯನ್ನು ಕೂಡಿಸಿ ಪುನಃ ಅದರ ಮಾರನೇ ದಿನ ಮುಖ್ಯ ಮಂತ್ರಿಯಾಗಿ ಆಯ್ಕೆಯಾಗುತ್ತ ಹೋಗಬಹುದೆ?

ತಮಿಳುನಾಡಿನ ಚುನಾವಣಾ ಫಲಿತಾಂಶವು ಇದೆಲ್ಲವೂ ಸಾಧ್ಯ ಎಂದು ಸಿದ್ಧಮಾಡಿತೋರಿಸುತ್ತಿದೆ. ಇನ್ನು ಆರು ತಿಂಗಳಲ್ಲಿ ಜಯಲಲಿತಾ ವಿಧಾನ ಸಭೆಗೆ ಆರಿಸಿ ಬರಬೇಕಾಗಿದೆ. ಆಗ ಅನೇಕ ಸೈದ್ಧಾಂತಿಕ ಹಾಗೂ ಸಂವಿಧಾನಾತ್ಮಕ ಪ್ರಶ್ನೆಗಳು ಏಳಲಿವೆ! ಒಂದು ವೇಳೆ ಆಗ ಭಾರತದ ಸಂವಿಧಾನದ ಮೂಲ ಧ್ಯೇಯೋದ್ದೇಶಗಳು ಮತ್ತು ಅದನ್ನು ಕುರಿತು ಇರುವ ಜನರ ಆಶೋತ್ತರಗಳು ಮೇಲುಗೈ ಸಾಧಿಸದಿದ್ದರೆ ಭಾರತದ ಪ್ರಜಾಪ್ರಭುತ್ವ ಭಾರಿ ಹಿನ್ನಡೆಯನ್ನು ಅನುಭವಿಸಬೇಕಾಗುತ್ತದೆ. ಈಗಾಗಲೇ ಜಯಲಲಿತಾರ ಆಯ್ಕೆಯ ಸಿಂಧುತ್ವವನ್ನು ಪ್ರಶ್ನಿಸಿ ಕೋರ್ಟುಗಳಲ್ಲಿ ಸಾರ್ವಜನಿಕ ಹಿತಾಸಕ್ತಿಯ ರಿಟ್‌ಗಳು ಬಂದಿವೆ. ಇಷ್ಟರಲ್ಲಿಯೇ ಅವುಗಳನ್ನು ಕುರಿತು ನ್ಯಾಯಾಲಯ ವಿಚಾರಣೆ ನಡೆಸಲಿದೆ. ಈಗ ದೇಶದ ಮುಂದೆ ಇರುವ ಒಂದೇ ಒಂದು ಆಶಾಕಿರಣವೆಂದರೆ

ನ್ಯಾಯಾಂಗದ ಸಂವಿಧಾನ ಪರ ಇರುವ ಅದರ ಕ್ರಿಯಾಶೀಲತೆ.

ಇದಕ್ಕೆ ಉದಾಹರಣೆಯಾಗಿ ಈ ಹಿಂದೆ ಆಗಿ ಹೋದ ಕೆಲವು ಘಟನೆಗಳನ್ನು ಜ್ಞಾಪಿಸಿಕೊಳ್ಳಬಹುದು. ೧೯೬೦ರಲ್ಲಿ ಸಿ.ಬಿ. ಗುಪ್ತಾ ಎಂಬುವರು ಚುನಾವಣೆಯಲ್ಲಿ ಸೋತಿದ್ದರೂ ಉತ್ತರ ಪ್ರದೇಶದ ಮುಖ್ಯಮಂತ್ರಿಯಾದರು; ೧೯೮೭ರಲ್ಲಿ ಸೀತಾರಾಮ್ ಕೇಸರಿಯವರ ವಿಷಯದಲ್ಲೂ ಹೀಗೇ ನಡೆಯಿತು; ೧೯೯೬ರಲ್ಲಿ ದೇವೇಗೌಡರು ಸಹ ಲೋಕಸಭಾ ಸದಸ್ಯರಾಗದೇ ಇದ್ದರೂ ಪ್ರಧಾನಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ಈ ಆರು ತಿಂಗಳ ರಿಯಾಯಿತಿ ವಿಧಿಯನ್ನು ಸಂವಿಧಾನ ರಚನಾ ಸಭೆ ಬಹಳವಾಗಿ ಬೆಂಬಲಿಸಿದೆಯೆಂಬುದಕ್ಕೆ ಡಾ॥ ಅಂಬೇಡ್ಕರ್ ಸ್ವತಃ ಆ ಸಭೆಯಲ್ಲಿ ಇದರ ಪರವಾಗಿ ಮಾತನಾಡಿದ್ದು ನಮ್ಮ ಮುಂದೆ ಇದೆ. ಭಾರತ ತನ್ನ ಹೊಸ ಸಂವಿಧಾನವನ್ನು ಜಾರಿಗೆ ತರುವ ಮುನ್ನ ಸಂವಿಧಾನ ಸಭೆಯಲ್ಲಿ ಅವರು ಹೇಳಿದ ಈ ಮಾತು ಬಹಳ ಮಾರ್ಮಿಕವಾಗಿದೆ. "ಈ ಹೊಸ ಸಂವಿಧಾನದ ಅಡಿಯಲ್ಲಿ ತಪ್ಪು ಬೆಳವಣಿಗೆಗಳಾದಲ್ಲಿ ಅದಕ್ಕೆ ಕಾರಣ ನಾವು ಕೆಟ್ಟ ಸಂವಿಧಾನ ಹೊಂದಿದ್ದೇವೆ ಎನ್ನುವುದಕ್ಕಿಂತಲೂ ಮನುಷ್ಯನೇ ಕೆಟ್ಟವನು ಎಂದು ಹೇಳುವುದು ಸರಿ." ಹೀಗಾಗಿ ೧೬೪ (೪) ರ ವಿಧಿಗೆ ಸಧ್ಯಕ್ಕಂತೂ ಯಾವುದೇ ಶಾಸನಾಧೀನ ನಿರ್ಬಂಧವಿಲ್ಲವಾಗಿದೆ.

ಇಂಥ ಬಿಕ್ಕಟ್ಟಿನ ವೇಳೆಯಲ್ಲಿ ನಮಗೆ ಜ್ಞಾಪಕಕ್ಕೆ ಬರುವುದು ಚುನಾವಣಾ ಆಯೋಗದ ಪಾತ್ರದ ಬಗ್ಗೆ. ಅಪರಾಧಿಯೊಬ್ಬನು ಚುನಾವಣೆಗೆ ಅನರ್ಹನೆಂಬ ಅದರ ಆದೇಶವನ್ನು ತಮಿಳುನಾಡಿನ ರಿಟರ್ನಿಂಗ್ ಆಫೀಸರಗಳು ಒಂದಲ್ಲ ನಾಲ್ಕು ಕಡೆ ಎತ್ತಿಹಿಡಿದರೆ, ಅದೇ ಕೇರಳದಲ್ಲಿಯ ಆಫೀಸರುಗಳು ಎತ್ತಿಹಿಡಿಯಲಿಲ್ಲ. ಈ ವೈರುಧ್ಯದ ಬಗ್ಗೆ ಚುನಾವಣಾ ಆಯೋಗ ಹೊಣೆಗಾರಿಕೆಯನ್ನು ರಿಟರ್ನಿಂಗ್ ಅಫೀಸರ್ಸ್ ಮೇಲೆ ಹೊತ್ತುಹಾಕಿ ಕೈತೊಳೆದುಕೊಂಡಿತು. ನಿಜವಾಗಿಯೂ ಈಗ ಆಗಬೇಕಾಗಿರುವುದು ಚುನಾವಣಾ ಆಯೋಗದ ರಚನೆಯ ವಿಧಾನದಲ್ಲಿಯೇ ಆಮೂಲಾಗ್ರ ಬದಲಾವಣೆ. ಮುಕ್ತ ಮತ್ತು ನ್ಯಾಯಯುತ ಚುನಾವಣೆಗಾಗಿ ಸ್ವತಂತ್ರ ಮತ್ತು ನೈತಿಕವಾಗಿ ಬಲಿಷ್ಠವಾದ ಚುನಾವಣಾ ಆಯೋಗದ ಮಹತ್ವ ಬಹಳವಾಗುತ್ತದೆ. ಈಗ ತಾನೇ ಡಾ॥ ಎಂ.ಎಸ್. ಗಿಲ್ ಅವರ ಸ್ಥಾನದಲ್ಲಿ ಕೇಂದ್ರ ಸರ್ಕಾರವು ಜಿ.ಎಮ್. ಲಿಂಗಡೋಹ್ ಅವರನ್ನು ಪ್ರಧಾನ ಚುನಾವಣಾ ಆಯುಕ್ತರನ್ನಾಗಿಯೂ ಮತ್ತು ಕೇಂದ್ರ ಸರ್ಕಾರದಲ್ಲಿ ಕಾರ್ಯದರ್ಶಿಯಾಗಿದ್ದ ಬಿ.ಬಿ. ಟಂಡನ್ ಅವರನ್ನು ಸದಸ್ಯರನ್ನಾಗಿಯೂ ನೇಮಿಸಿದೆ. ಈ ನಿಯುಕ್ತಿಗಳಾಗಬೇಕಿದ್ದರೆ ಕೇಂದ್ರ ಸರ್ಕಾರವು ವಿರೋಧ ಪಕ್ಷಗಳ ಜೊತೆ ಪರಾಮರ್ಶಿಸಬೇಕಿತ್ತು. ಬಿ.ಜೆ.ಪಿ.ಯು ತನ್ನ ಚುನಾವಣಾ ಪ್ರಣಾಳಿಕೆ

ಯಲ್ಲಿ ಚುನಾವಣಾ ಆಯೋಗದ ಆ ಮೂಲಾಗ್ರ ಬದಲಾವಣೆಯ ಬಗ್ಗೆ ಪ್ರಸ್ತಾಪಿಸಿತ್ತು. ಆದರೆ ಈಗ ಅದು ಅಧಿಕಾರಕ್ಕೆ ಬಂದ ಮೇಲೆ ಆ ವಿಷಯವನ್ನು ಬಹಳ ಅನುಕೂಲಕರವಾಗಿ ಮರೆತುಬಿಟ್ಟಿದೆ. ಅಂದರೆ, ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಮುನ್ನ ಏನೆಲ್ಲ ವಚನ ಕೊಡಬಹುದು. ಆದರೆ ಅಧಿಕಾರದ ಗದ್ದುಗೆ ಏರಿದಮೇಲೆ ಆ ವಚನವನ್ನು ಮರೆತು ಬಿಡಬಹುದು. ಇವು ರಾಜಕೀಯ ಪಕ್ಷಗಳಿಂದ ಜನತೆಗಾಗುತ್ತಿರುವ ಮೋಸದ ಪ್ರಕರಣಗಳಾಗಿವೆ. ಪ್ರಣಾಳಿಕೆಯ ಬಗ್ಗೆ ಬದ್ಧತೆ ಇರದ ರಾಜಕೀಯ ಪಕ್ಷಗಳ ಮಾನ್ಯತೆ ರದ್ದಾಗಬೇಕು.

ಇನ್ನು ಚುನಾಯಿತ ಪ್ರತಿನಿಧಿಗಳು ವಿಧಾನಸಭೆಗಳಲ್ಲಿ ಹಾಗೂ ಲೋಕಸಭೆಯಲ್ಲಿ ವರ್ತಿಸುವ ರೀತಿಯನ್ನು, ಉಪಯೋಗಿಸುವ ಭಾಷೆಯನ್ನು ಗಮನಿಸಿದಾಗ ಇದು ಪ್ರಜಾಪ್ರಭುತ್ವ ಪದ್ಧತಿಯೇ ಅಥವಾ ಪ್ರಜಾದ್ರೋಹಿಯೋ ಎಂಬ ಬಗ್ಗೆ ಅನುಮಾನ ಬರುತ್ತದೆ.

ವೆಂಕಟಾಚಲಯ್ಯ ಆಯೋಗವು ಸಂವಿಧಾನ ತಿದ್ದುಪಡಿಯ ವಿಷಯವನ್ನು ಪರಿಶೀಲಿಸುತ್ತಿದೆ. ಈ ಎಲ್ಲ ಅಂಶಗಳನ್ನು ಅದು ಗಮನಕ್ಕೆ ತಂದುಕೊಂಡು ಒಂದು ಒಳ್ಳೆಯ ಶಿಫಾರಸು ಮಾಡಿದಲ್ಲಿ ಮತ್ತು ಅದನ್ನು ಲೋಕಸಭೆ ತೆರೆದ ಮನಸ್ಸಿನಿಂದ ಸ್ವೀಕರಿಸಿದಲ್ಲಿ ನಮ್ಮ ಪ್ರಜಾಪ್ರಭುತ್ವಕ್ಕೆ ಒಳ್ಳೆಯ ಭವಿಷ್ಯ ಉಂಟಾದೀತು.

ನಮ್ಮ ಸಂವಿಧಾನ ರಚನಾಕಾರರು ಸಂವಿಧಾನದಲ್ಲಿ ೧೬೪ (೪)ನೇ ವಿಧಿಯನ್ನು ಸೇರಿಸಿದಾಗ ಅಂದರೆ ಜನತಾ ಪ್ರತಿನಿಧಿಗಳ ಸಭೆಗೆ ಆಯ್ಕೆಯಾಗಿ ಬರದೇ ಇರುವ ಮುಖಂಡ ಆರು ತಿಂಗಳ ಒಳಗಾಗಿ ಆಯ್ಕೆಯಾಗಿ ಬರಬೇಕೆಂಬ ನಿಯಮದ ಮೇಲೆ ಪ್ರಧಾನ ಮಂತ್ರಿ ಅಥವಾ ಮುಖ್ಯಮಂತ್ರಿಯಾಗಬಹುದೆಂಬ ವಿಧಿಯನ್ನು ಸೇರಿಸಿದಾಗ ಅಪರಾಧಿಗಳೂ ಆಯ್ಕೆಯಾಗಿ ಬರುತ್ತಾರೆಂದು ಅವರು ಊಹಿಸಿರಲಿಲ್ಲ. ಏಕೆಂದರೆ ಐವತ್ತು ವರ್ಷಗಳ ಹಿಂದೆ ಸಂವಿಧಾನ ರಚನೆಯಾಗುತ್ತಿದ್ದ ಕಾಲದಲ್ಲಿ ನಮ್ಮ ದೇಶದ ಜನಜೀವನದಲ್ಲಿ, ರಾಜಕಾರಣದಲ್ಲಿ ಕೆಲವು ಸಾಮಾಜಿಕ ಮೌಲ್ಯಗಳಿದ್ದವು. ಒಂದು, ಒಬ್ಬ ಅಪರಾಧಿಯಾದ ಮನುಷ್ಯ ಸಾರ್ವಜನಿಕ ರಂಗಕ್ಕೆ ಬರುವ ಧೈರ್ಯ ಮಾಡಲಾರ; ಎರಡು, ಒಂದುವೇಳೆ ಹಾಗೆ ಅವನು ಪ್ರಯತ್ನಿಸಿದರೂ ಯಾವ ರಾಜಕೀಯ ಪಕ್ಷವೂ ಅವನಿಗೆ ಟಿಕೆಟ್ ಕೊಡಲಾರದು. ಆದರೆ ಈಗ ಈ ಎರಡೂ ಊಹೆಗಳು ಸುಳ್ಳಾಗಿವೆ. ಈಗ ಕೇವಲ ಆ ವಿಧಿಯಲ್ಲಿಯ ಶಬ್ದಗಳ ಅರ್ಥವನ್ನು ಆಧರಿಸಿ ತೀರ್ಮಾನ ಕೈಗೊಳ್ಳಲಾಗುತ್ತಿದೆ. ಹೀಗೆ ಮಾಡದೇ ಇರುವುದಕ್ಕೆ ಬೇರೆ ಉದಾಹರಣೆಗಳು ಇಲ್ಲ ಅನ್ನುವುದು ಒಂದು ಕಾರಣವಾದರೆ ಇನ್ನೊಂದು ಕಾರಣ, ರಾಜ್ಯದಲ್ಲಿ ಆ ಮುಖಂಡನ ಬೆಂಬಲಿಗರಿಂದ ಕಾನೂನು ಸುವ್ಯವಸ್ಥೆಗೇ ಧಕ್ಕೆ ಬರುತ್ತದೆಂಬ ಭೀತಿಯ ಕತ್ತಿ ಆಯಾ ರಾಜ್ಯದ ರಾಜ್ಯಪಾಲರ ತಲೆಯಮೇಲೆ ನೇತಾಡುತ್ತಿರು

ತ್ತದೆ. "ಜನರ ತೀರ್ಪೇ ಮಹೇಶನ ತೀರ್ಪು" ಎಂಬ ಘೋಷಣೆ ತಮಿಳು ನಾಡಿನಾದ್ಯಂತ ಮೊಳಗುತ್ತಿದೆ ಇಂಥದೇ ವಾತಾವರಣ ಬೇರೆಡೆಯಲ್ಲಿಯೂ ಇದೆ. ಯಾವ ಪ್ರಜಾಪ್ರಭುತ್ವದಲ್ಲಿ ಕೇವಲ ಬಹುಮತದ ಆಧಿಪತ್ಯ ಇರುತ್ತದೊ ಅಲ್ಲಿ ಬೇರೆ ಸಾಮಾಜಿಕ, ನೈತಿಕ ಮೌಲ್ಯಗಳಿಗೆ ಸ್ಥಾನವಿರುವುದಿಲ್ಲ ವೆಂಬುದು ಅನುಭವಕ್ಕೆ ಬರುತ್ತಿದೆ. ಇದು ಪ್ರಜಾಪ್ರಭುತ್ವದಲ್ಲಿಯ ದೊಡ್ಡ ದೋಷ. ೧೬೪ನೇ ವಿಧಿಯ ಪ್ರಕಾರ ಯಾವುದೇ ಒಬ್ಬ ದೊಡ್ಡ ಡಕಾಯಿತನೂ ಚುನಾವಣೆಯಲ್ಲಿ ಆಯ್ಕೆಯಾಗಿ ಬರದೇ ಕೇವಲ ಬಹುಮತದ ಪಕ್ಷದ ನಾಯಕನಾಗಿ ಆಯ್ಕೆಯಾಗಿ ಬಂದು ಆರು ತಿಂಗಳು ಕಾಲ ಉಚಿತವಾಗಿ ರಾಜ್ಯಭಾರ ಮಾಡಿ ಹೋಗುವ ಅವಕಾಶ ನಮ್ಮ ಸಂವಿಧಾನದಲ್ಲಿದೆ, ನಮ್ಮ ಪ್ರಜಾಪ್ರಭುತ್ವ ಪದ್ಧತಿಯಲ್ಲಿದೆ.

ಬರ್ಕ್ ಎಂಬ ರಾಜನೀತಿ ಶಾಸ್ತ್ರಜ್ಞ ಈ ಕುರಿತು ಹೇಳಿದ ಮಾತು ನಗ್ನ ಸತ್ಯವಾಗಿದೆ. "ಒಂದು ತರ್ಕವನ್ನು ಗೆಲ್ಲುವ ಪ್ರಯತ್ನದಲ್ಲಿ ಸಾಮ್ರಾಜ್ಯವನ್ನೇ ನೀವು ಕಳೆದು ಕೊಳ್ಳುವುದಾದರೆ ಅದರಿಂದೇನು ಪ್ರಯೋಜನ?" ಬರ್ಕನ ಈ ಮಾತನ್ನು ಬಹುಮತದಲ್ಲಿರುವವರೆಲ್ಲರೂ ಅನುಸರಿಸುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಸಾಮಾಜಿಕ ಮೌಲ್ಯಗಳು ಕುಸಿಯುತ್ತಾ ಹೋದರೆ ಆಶ್ಚರ್ಯ ಪಡಬೇಕಾಗಿಲ್ಲ. ೧೯೫೦ ರ ಸುಮಾರಿನಲ್ಲಿ ಶ್ರೇಷ್ಠ ಚಿಂತಕ ಬರ್ಟ್ರ್ಯಾಂಡ್ ರಸೆಲ್ ಹೇಳಿದ್ದೇನೆಂದರೆ ಕಳೆದ ಎರಡು ದಶಕಗಳಲ್ಲಿ ಉಂಟಾಗಿರುವಷ್ಟು ಮಾನವೀಯ ಸಂಕಷ್ಟಗಳು ಈ ಮೊದಲು ಎಂದೂ ಆಗಿರಲಿಲ್ಲ. ಈಗ ನಾವು ಸುತ್ತಲೂ ನೋಡಿದಲ್ಲಿ ಆ ಸಂಕಷ್ಟಗಳ ಪ್ರಮಾಣ ಹೆಚ್ಚಾಗುತ್ತಲೇ ಇದೆ. ಇದಕ್ಕೆ ಕಾರಣ ನಮ್ಮ ಪ್ರಜಾಪ್ರಭುತ್ವದ ಆಚರಣೆಯಲ್ಲಿಯ ದೋಷವೇ ಎಂದು ಬೇರೆ ಹೇಳಬೇಕಾಗಿಲ್ಲ, ಪ್ರಜಾಪ್ರಭುತ್ವ ಮತ್ತು ಅಪರಾಧ ಎರಡೂ ಸಂಲಗ್ನಗೊಳ್ಳುವುದು ತಪ್ಪುವವರೆಗೂ ನಮ್ಮ ದೇಶದ ಪ್ರಜಾಪ್ರಭುತ್ವ ಹಿನ್ನಡೆಯನ್ನು ಸಾಧಿಸುತ್ತ ಹೋಗುವುದು. ಇಲ್ಲಿ ಒಂದು ಬಹಳ ಆತಂಕದ ಸಂಗತಿಯೇನೆಂದರೆ ಯಾವ ಪಕ್ಷದ ನಾಯಕಿ ಅಪರಾಧಿಯಾಗಿದ್ದಾಳೋ ಅಂಥವಳ ನೇತೃತ್ವದ ಪಕ್ಷದೊಂದಿಗೆ ಕಾಂಗ್ರೆಸ್ ಕೈಗೂಡಿಸಿದುದು. ಇದು ತತ್ವರಹಿತ ಹಾಗೂ ನೀತಿ ರಹಿತ ರಾಜಕಾರಣದ ಜ್ವಲಂತ ಉದಾಹರಣೆಯಾಗಿದೆ.

ಒಟ್ಟಿನಲ್ಲಿ ನಮ್ಮ ದೇಶದ ಪ್ರಜಾಪ್ರಭುತ್ವ ಆರೋಗ್ಯಕರವಾದ ದಾರಿಯಲ್ಲಿ ಮುನ್ನಡೆಯುವುದರ ಬದಲು ಆತಂಕಕಾರಿಯಾದ ದಾರಿಯಲ್ಲಿ ಸಾಗುತ್ತಿದೆ. ಯಾವ ಪ್ರಜಾಪ್ರಭುತ್ವ ಪ್ರಜೆಗಳ ಅನೀತಿಯಿಂದ ಹಾಳಾಗುತ್ತದೋ ಆ ಆ ಪ್ರಜಾಪ್ರಭುತ್ವ ಪ್ರಜೆಗಳ ನೀತಿಯಿಂದಲೇ ಉದ್ಧಾರಗೊಳ್ಳಬೇಕಿದೆ. ಆ ಕಾಲ ಯಾವಾಗ ಬರುವುದೊ? ★

ಜನಪದ ಸಂಗತಿ.................... ೨ ನೇ ಪುಟದಿಂದ

ಈ ದೋಷವನ್ನು ರಾಜ್ಯ ಸಾರಿಗೆ ಸಂಸ್ಥೆಯು ನಿವಾರಿಸುವವರೆಗೆ ಹನುಗುಂದದ ಬಸ್‌ಸ್ಟ್ಯಾಂಡಿನಲ್ಲಿ ಕಡ್ಲೆಕಾಯಿ ಮಾರುವ ಮಹಾಂತೇಶ ಬಾವಿಕಟ್ಟಿಯಂಥ "ಬಾಯಿಪಾಠದ ಸಮಯ ಸಾರಿಣಿ"ಗೆ ಪ್ರಯಾಣಿಕರು ಆಭಾರಿಯಾಗಿರಲೇಬೇಕಾಗುತ್ತದೆ.

ಅನೇಕ ವಿದೇಶಿಯರು ಭಾರತದ ನವನಿರ್ಮಾಣದ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಂಥವರ ಸಂಖ್ಯೆ ಬಹು ದೊಡ್ಡದಾಗಿದೆ. ಅಲ್ಲದೆ ಅವರ ಆಸಕ್ತಿಗಳು ಕೂಡ ವೈವಿಧ್ಯಮಯವಾಗಿವೆ. ಕೆಲವರದು ಭಾರತೀಯ ಸಂಸ್ಕೃತಿ. ಭಾಷೆಗಳಾಗಿದ್ದಾರೆ, ಇನ್ನು ಕೆಲವರದು ಧಾರ್ಮಿಕ; ಇನ್ನು ಕೆಲವರದು ಸಾಮಾಜಿಕ. ಹಲವಾರು ಜನ ರಾಜಕೀಯ ಕ್ಷೇತ್ರದಲ್ಲೂ ಕೆಲಸ ಮಾಡಿದ್ದಾರೆ. ಈ ಪರಂಪರೆ ಅವ್ಯಾಹತವಾಗಿ ನಡೆದುಕೊಂಡೇ ಬಂದಿದೆ. ಬಹಳ ಇತ್ತೀಚಿಗಿನ ಉದಾಹರಣೆ ಅಮೆರಿಕೆಯ ಮಹಿಳೆ ಮೇವಿಸ್‌ಳದು. ಈಕೆ ಭಾರತಕ್ಕೆ–ಕರ್ನಾಟಕಕ್ಕೆ– ಬಂದು ಶ್ಯಾಮಲಾ ಹಿರೇಮಠರಾದರು. ೨೧ ವರ್ಷಗಳ ಕಾಲ ಧಾರವಾಡ ಜಿಲ್ಲೆಯಲ್ಲಿದ್ದುಕೊಂಡು ರಚನಾತ್ಮಕ ಕೆಲಸ ಮಾಡಿದರು. ತಮ್ಮ ಇಬ್ಬರು ಮಕ್ಕಳನ್ನು ವೇಡ್ಲೇರಿ ಎಂಬ ಹಳ್ಳಿಯ ಶಾಲೆಗೇ ಕಳುಹಿಸಿದರು. ಅವರಿಗೆ ದಾಂಪತ್ಯ ಜೀವನ ಎಷ್ಟು ಮಹತ್ವದ್ದೋ ಅಷ್ಟೇ ಮಹತ್ವದ್ದು ಸಮಾಜಸೇವೆ. ಆದ್ದರಿಂದಲೇ ಅವರು ಆಗಾಗ್ಗ ಹೇಳುತ್ತಿದ್ದರು, "ನಾನು ಗೃಹಿಣಿಯಾಗಿ ಈ ದೇಶಕ್ಕೆ ಬಂದೆ ಅನ್ನುವುದಕ್ಕಿಂತಲೂ ಸಮಾಜ ಸೇವಕಿಯಾಗಿ ಇಲ್ಲಿಗೆ ಬಂದೆ ಎನ್ನುವುದು ಸೂಕ್ತ", ಧರ್ಮ ಮತ್ತು ರಾಜಕೀಯದ ಬಗ್ಗ ಅವರ ಅಭಿಪ್ರಾಯ ಕೇಳಿದಾಗ ಅವರು ಕೊಡುತ್ತಿದ್ದ ಉತ್ತರ ಅರ್ಥಪೂರ್ಣವಾಗಿರುತ್ತಿತ್ತು. ಅವರ ಪ್ರಕಾರ ಧರ್ಮ ಮತ್ತು ರಾಜಕೀಯಗಳು ಪ್ರಮುಖ ವಿಷಯ ಅಲ್ಲವೇ ಅಲ್ಲ. ಅವು ವ್ಯಕ್ತಿಯನ್ನು ಬೆಳೆಸುತ್ತವೆ ಎನ್ನುವುದಕ್ಕಿಂತಲೂ ಒಬ್ಬ ವ್ಯಕ್ತಿ ಬೆಳೆದಂತೆ ಅವನ ಧರ್ಮ – ರಾಜಕೀಯಗಳೂ ಬೆಳೆಯುತ್ತವೆ ಎನ್ನುವುದು ಸತ್ಯ. ಮೇವಿಸ್ ಸ್ಥಾಪಿಸಿದ ಭಾರತ ಅಭ್ಯುದಯ ಸೇವಾ ಸಂಸ್ಥೆ ಏಳು ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿದೆ. ೧೬೩ ಹಳ್ಳಿಗಳು ಈ ಸಂಸ್ಥೆಯ ಸಂಪರ್ಕಕ್ಕೆ ಬಂದಿವೆ. ೬೩೫ ಸಂಘಗಳ ಮೂಲಕ ಮಹಿಳೆಯರ, ಮಕ್ಕಳ ಹಾಗೂ ಪುರುಷರ ಉನ್ನತಿಗಾಗಿ ಕೆಲಸ ಮಾಡುತ್ತಿದೆ. ಇಂಥ ರಚನಾತ್ಮಕ ಕಾರ್ಯಕರ್ತೆಯಾಗಿ ಕರ್ನಾಟಕದಲ್ಲಿ ಕೆಲಸ ಮಾಡಿದ ಅನೇಕ ವಿದೇಶಿಯರಲ್ಲಿ ಮೇವಿಸ್ ಉರ್ಫ್ ಶ್ಯಾಮಲಾ ಹಿರೇಮಠ ಒಬ್ಬರು. ಅವರಿಗೆ ಕರ್ನಾಟಕ ಋಣಿಯಾಗಿದೆ.

ಟಾಲ್‌ಸ್ಟಾಯ್

–ವಿನೋಬಾ

["ವಿಚಾರಗಳ ಪ್ರಕಾಶನವಾಗಬೇಕು. ಆಕಾಶದ ಮೂಲಕ ಪ್ರಕಾಶ ಹರಡುತ್ತದೆ. ಪ್ರಕಾಶದ ಹರಡುವಿಕೆಯನ್ನು ಆಕಾಶವು ತಡೆಯಲೂಬಹುದು. ಪರಂತು ವಿಚಾರದ ಪ್ರಕಾಶನವನ್ನು ಯಾರೂ ತಡೆಯಲಾರರು. ವಿಚಾರದ ಕಣಗಳನ್ನು ಗಾಳಿ ಹರಡುವುದು. ಆಕಾಶ ಅದನ್ನು ಎತ್ತಿಕೊಳ್ಳುವುದು. ಹಕ್ಕಿಗಳು ಅದನ್ನು ಬಿತ್ತರಿಸುವವು. ವಿಚಾರಗಳನ್ನು ತಿಳಿದಾನಂತರ ಮನುಷ್ಯನ ಅಂತರ್ಯದಲ್ಲಿ ಪರಿವರ್ತನೆಯಾದರೆ ಅದು ಕ್ರಾಂತಿ" ಎಂಬ ದೃಷ್ಟಿಯನ್ನು ಹೊಂದಿರುವ ಶ್ರೇಷ್ಠ ಚಿಂತಕ ವಿನೋಬಾರಿಂದ ಇನ್ನೋರ್ವ ಶ್ರೇಷ್ಠ ಚಿಂತಕ ಟಾಲಸ್ಟಾಯುವರ ಅಪೂರ್ವವಾದ ಪರಿಚಯವಿಲ್ಲಿದೆ. –ಸಂ]

೨೮ ಅಕ್ಟೋಬರ್ ಟಾಲಸ್ಟಾಯ್ ಅವರ ಜನ್ಮದಿನಾಂಕ. ಮಾರ್ಕ್ಸನದೂ ಕೂಡ. ಇಬ್ಬರೂ ಈ ಯುಗದ ಪ್ರೇರಕಶಕ್ತಿಗಳಾಗಿದ್ದರು. ಆದರೆ ಟಾಲ್‌ಸ್ಟಾಯ್ ಪ್ರೇರಕರಾಗುವುದರ ಜೊತೆಗೆ ತಾರಕವೂ ಆಗಿದ್ದರು. ಟಾಲ್‌ಸ್ಟಾಯ್ ಕೊಟ್ಟ ವಿಚಾರಗಳು ಸರ್ವೋದಯ ವಿಚಾರಗಳಾಗಿವೆಯೆಂದೇ ನಾನು ಭಾವಿಸುತ್ತೇನೆ.

ಕಳೆದ ನೂರು ಇನ್ನೂರು ವರ್ಷಗಳ ಮಾನವ ಸಮಾಜದ ಜೀವನವನ್ನು ಜರಡಿಯಾಡಿದರೆ ಎರಡು ಹೆಸರುಗಳು ಕೈಗೆ ಸಿಗುತ್ತವೆ. ಮಹಾತ್ಮಗಾಂಧಿ ಮತ್ತು ಮಹಾಮುನಿ ಮಾರ್ಕ್ಸ. ಇಂದು ಸಾಮ್ಯವಾದ ಮತ್ತು ಸರ್ವೋದಯ ಈ ಎರಡೂ ವಿಚಾರ ಪ್ರವಾಹಗಳು ಒಂದು ಇದ್ನೊಂದನ್ನು ಆತ್ಮಸತ್ ಮಾಡಿಕೊಳ್ಳುವುದಕ್ಕಾಗಿ ಎದುರುಬದರು ನಿಂತಿವೆ. ಗಾಂಧೀಜಿಯವರ ಹಿಂದೆ ಟಾಲಸ್ಟಾಯವರ ಛಾಯೆ ಗೃಹೀತನೇ ಆಗಿದೆ. ಗಾಂಧೀಜಿ ಪ್ರೇರಕವಾಗಿಯೂ ಇದ್ದರು, ತಾರಕವಾಗಿಯೂ ಇದ್ದರು.

ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ಟಾಲಸ್ಟಾಯ್ ಫಾರ್ಮ ಮಾಡಿದ್ದರು. ಅಲ್ಲಿ ಅವರು ಶ್ರಮ ಮಾಡುತ್ತಿದ್ದರು. ಟಾಲಸ್ಟಾಯ್ ಎಲ್ಲಿ, ಮಹಾತ್ಮಗಾಂಧಿ ಎಲ್ಲಿ! ವಿಚಾರದ ಪ್ರಭಾವದಿಂದಲೇ ಈ ಹಾರ್ದಿಕ ಅನುಬಂಧವುಂಟಾಗಿತ್ತು. ಸೂಕ್ಷ್ಮವಾದ ಸ್ಪರ್ಶ ವಿಚಾರದ್ದೇ ಆಗಿರುತ್ತದೆ. ಗಾಳಿಯೇ ಆ ಕೆಲಸವನ್ನು ಮಾಡುತ್ತದೆ.

ಅಹಿಂಸೆಯ ವಿವೇಚನೆ ಮಾಡುತ್ತ ಟಾಲ್‌ಸ್ಟಾಯ್ ಹೇಳಿದ್ದೇನೆಂದರೆ ನಾವು ಹಿಂಸೆಯ ಮೂಲಕ ಸ್ವಾತಂತ್ರ್ಯ ಪಡೆದರೆ ಅದು ಕೇವಲ ಹೆಸರಿಗೆ ಮಾತ್ರ

ಇರುವ ಸ್ವಾತಂತ್ರ್ಯವಾಗುತ್ತದೆ. ವಾಸ್ತವವಾಗಿ ಒಂದು ಗುಲಾಮೀಯನ್ನು ನಿವಾರಿಸ ಹೋಗಿ ಇನ್ನೊಂದು ಗುಲಾಮಗಿರಿಯನ್ನು ಹುಟ್ಟುಹಾಕುತ್ತೇವೆ. ಪ್ರತಿಯೊಂದು ಹೊಸ ಸ್ವಾತಂತ್ರ್ಯವು ತನ್ನೊಳಗೆ ಇನ್ನೊಂದು ಹೊಸ ಗುಲಾಮಗಿರಿಯನ್ನು ತೆಗೆದುಕೊಂಡು ಬರುತ್ತದೆ. ಆದ್ದರಿಂದ ನಿಜವಾದ ಸ್ವಾತಂತ್ರ್ಯವು ಮನುಷ್ಯ ತನ್ನ ಇಚ್ಛೆಗಳಿಗೆ ತಾನು ಅಧೀನನಾಗುವುದರಿಂದ ರಕ್ಷಿಸಿಕೊಂಡಾಗ, ಅಧೀನವಾಗದೇ ಇರುವುದನ್ನು ಕಲಿತಾಗ ಬರುತ್ತದೆ. ಆಗ ನಿಧಾನವಾಗಿ ಇಚ್ಛೆಗಳು ಹುಟ್ಟುವುದೇ ನಿಂತುಹೋಗುವುದು ಮತ್ತು ಆಗ ಮನುಷ್ಯ ಯಥಾರ್ಥವಾಗಿ ಸ್ವತಂತ್ರನಾಗುವನು. ಆನಂತರ ತನ್ನ ಮನಸ್ಸಿನದೂ ನಡೆಯುವುದಿಲ್ಲ. ಆಗ ನಿಜವಾದ ಶಾಸನ ಮುಕ್ತಿಯಾಗುವುದು.

ಟಾಲಸ್ಟಾಯ್ ತಮ್ಮನ್ನು ತಾವೇ ಕೆಲವು ಪ್ರಶ್ನೆಗಳನ್ನು ಕೇಳಿದ್ದರು. ಯಾವಾಗ ಅವುಗಳಿಗೆ ತೃಪ್ತಿಕರವಾದ ಉತ್ತರ ದೊರೆಯಲಿಲ್ಲವೊ ಆಗ ಅವರ ಜೀವನ ದುಃಖದಿಂದ ಕೂಡಿತ್ತು ಕೆಲವು ಮುಖ್ಯ ಪ್ರಶ್ನೆಗಳು ಹೀಗಿದ್ದವು:-

೧. ನಾನು ಯಾರಿಗಾಗಿ ಬದುಕುತ್ತೇನೆ ?

೨. ಜೀವನದ ಉದ್ದೇಶ್ಯವೇನು ?

೩. ಒಳ್ಳೆಯ ಮತ್ತು ಕೆಟ್ಟ ಇವುಗಳ ಭೇದದ ಅರ್ಥವೇನು ?

೪. ನಾವು ಯಾವ ಪ್ರಕಾರ ಜೀವಿಸಬೇಕು ?

೫. ಮರಣವೆಂದರೇನು ?

೬. ನಾನು ನನ್ನ ರಕ್ಷಣೆ ಯಾವ ಪ್ರಕಾರ ಮಾಡಿಕೊಳ್ಳಬೇಕು ?

ಈ ಪ್ರಶ್ನೆಗಳಿಗೆ ಟಾಲಸ್ಟಾಯ್ ಕೊನೆಯಲ್ಲಿ ಕಂಡುಕೊಂಡ ಉತ್ತರವೇನೆಂದರೆ: ದೇವರ ಇಚ್ಛೆಗನುಸಾರ ಜೀವನಯಾಪನ ನಡೆಸುವುದೇ ಮಾನವ ಜೀವನದ ಮುಖ್ಯ ಉದ್ದೇಶ್ಯ ಮತ್ತು ಮನುಷ್ಯರು ಪರಸ್ಪರ ಪ್ರೇಮಭಾವದಿಂದ ಶಾಂತಿಪೂರ್ವಕವಾಗಿ ಸಹಜೀವನ ನಡೆಸಬೇಕು. ಮಾನವ ಸಮಾಜವು ಇದಕ್ಕೆ ವಿಪರೀತವಾಗಿ ಆಚರಣೆಮಾಡುತ್ತಿರುವುದರಿಂದ ಅದು ದುಃಖದಿಂದ ಕೂಡಿದೆ.

ಒಂದು ಕುಟುಂಬದಲ್ಲಿ ಎಷ್ಟೊಂದು ತ್ಯಾಗ ಮಾಡಬೇಕಾಗುತ್ತದಲ್ಲವೆ? ಮನುಷ್ಯನು ತನ್ನ ಕುಟುಂಬಕ್ಕಾಗಿ ಏಸುಗಿಂತಲೂ ಹೆಚ್ಚು ತ್ಯಾಗ ಮಾಡುತ್ತಾನೆ ಎಂಬುದಾಗಿ ಟಾಲಸ್ಟಾಯ್ ಹೇಳಿದ್ದಾರೆ. ಸಂಸಾರದಲ್ಲಿ ಯಾವ ಅನಂತವಾದ ಆಧಿ-ವ್ಯಾಧಿ-ಉಪಾಧಿಗಳನ್ನು ಮನುಷ್ಯ ಅನುಭವಿಸುತ್ತಾನೋ ಅದು ಚಿಕ್ಕ ಪುಟ್ಟ ತಪಸ್ಯೆನಲ್ಲ. ಈ ಭಯಂಕರ ತಪಃಶ್ಚರ್ಯವನ್ನು ಮನುಷ್ಯನು ಜ್ಞಾನಪೂರ್ವಕ ಮಾಡಿದ್ದೇಯಾದಲ್ಲಿ ಅದರ ಮುಂದೆ ಏಸು ಅಂಥವರ ತಪಸ್ಸು

ಅಲ್ಪವೆಂದೇ ಸಿದ್ಧವಾಗುವುದು. ಸಂಸಾರದಲ್ಲಿ ಮುಳುಗಿರುವ ಜನರು ಏಸುವಿಗಿಂತಲೂ ಹೆಚ್ಚು ತಪಸ್ಸು ಮಾಡುತ್ತಿರಾದರೂ ಅವರ ಇಡೀ ತಪಸ್ಸು ವ್ಯರ್ಥವಾಗುತ್ತದೆ. ಅವರು ಮಾಡುತ್ತಿರುವ ತ್ಯಾಗದಲ್ಲಿ ಅರ್ಧದಷ್ಟನ್ನಾದರೂ ದೇವರಿಗಾಗಿ ಮಾಡಿದರೆ ಅವರು ಮಹಾಪುರುಷರೇ ಆಗುತ್ತಾರೆ.

ಟಾಲಸ್ಟಾಯ್ ಇಸಾಯಿ ಧರ್ಮದ ಅತ್ಯಂತ ಉತ್ತಮ ಸೇವೆ ಮಾಡಿದರು. ಆದರೆ ಪೋಪ್ ಆವರನ್ನು ಬಹಿಷ್ಕರಿಸಿದ್ದರು. ಚರ್ಚ ಕೂಡ ಅವರನ್ನು ಬಹಿಷ್ಕರಿಸಿತ್ತು. ನಿಜವಾದ ಧರ್ಮವನ್ನು ತಿಳಿದಂಥವರ ಮೇಲೆ ಸನಾತನಿಗಳಿಂದ ದಾಳಿ ಆಗುತ್ತದೆ. ಟಾಲಸ್ಟಾಯ್ ಆಚಾರ್ಯರಾಗಿದ್ದರು. ಆಚಾರ್ಯರನ್ನು ದೇಶದಿಂದ ಓಡಿಸಲಾಗಿತ್ತು.

ಟಾಲಸ್ಟಾಯ್ ಬಹಳಷ್ಟು ಗ್ರಂಥಗಳನ್ನೂ, ಕಾದಂಬರಿಗಳನ್ನೂ ಬರೆದರು. ಉತ್ತಮ ಲೇಖಕರು ಶಬ್ದಗಳ ಬಗ್ಗೆ ಪದೇ ಪದೇ ಆಲೋಚಿಸುತ್ತಿರುತ್ತಾರೆ ಮತ್ತು ಬದಲಿಸುತ್ತಿರುತ್ತಾರೆ. ಟಾಲಸ್ಟಾಯರವರ ಪುಸ್ತಕಗಳ ಪ್ರಕಾಶರಿಗೆ ಬೇಸರವಾಗುತ್ತಿತ್ತು. ಅವರು ತಂತಿಮೂಲಕ ಕರೆಕ್ಷನ್ ಕಳುಹಿಸುತ್ತಿದ್ದರು.

ಟಾಲಸ್ಟಾಯ್ ಮಹಾನ್ ಸಾಹಿತ್ಯಕಾರರಾಗಿದ್ದರು. ಅವರ ಒಂದೊಂದು ಕಾದಂಬರಿಯೂ ಸಾವಿರಾರು ಪುಟಗಳಷ್ಟು ಇದೆ. ಆದರೆ ಅವರು ಸ್ವಯಂ ವಿಮರ್ಷೆ ಮಾಡಿಕೊಳ್ಳುತ್ತ ಹೀಗೆ ಹೇಳಿದರು, "ನಾನು ಬರೆದಿರುವಂಥ ದೊಡ್ಡ ದೊಡ್ಡ ಕಾದಂಬರಿಗಳಲ್ಲಿ ಯಾವ ಸಾಹಿತ್ಯಕ ಅಂಶವೂ ಇಲ್ಲ. ಆದರೆ ನಾನು ಬರೆದಿರುವ ಚಿಕ್ಕಚಿಕ್ಕ ಕಥೆಗಳಲ್ಲಿ ಕಲಾತ್ಮಕತೆ ಖಂಡಿತವಾಗಿ ಪ್ರಕಟಗೊಂಡಿದೆ".

ಯಾರೋ ಟಾಲಸ್ಟಾಯರನ್ನು ಕೇಳಿದರು, "ನೀವು ಅನೇಕ ಕಾದಂಬರಿಗಳನ್ನು ಬರೆದಿರುವಿರಲ್ಲವೆ?"

"ಹೌದು. ಬರೆದಿದ್ದೇನೆ. ಆದರೆ ಆಗ ನನ್ನ ಬುದ್ಧಿ ಸ್ಥಿಮಿತವಾಗಿರಲಿಲ್ಲ. ಕೊಂಡುಕೊಳ್ಳಲಾಗುತ್ತಿರುವ ನನ್ನ ಪುಸ್ತಕಗಳಲ್ಲಿ ಯಾವ ಸಾರವೂ ಇಲ್ಲ."

ಅವರ 'ವಾರ್ ಎಂಡ್ ಪೀಸ್' ಓದುವುದಕ್ಕಾಗಿ ತೆಗೆದುಕೊಂಡೆ. ಪ್ರಾರಂಭ ಮತ್ತು ಕೊನೆ ನೋಡಿ ಇಟ್ಟುಬಿಟ್ಟೆ. ಅವರ ಕಾದಂಬರಿಗಳನ್ನು ನಾನು ಓದಲೇ ಇಲ್ಲ. ಏಕೆಂದರೆ ಅವರು ಸ್ವತಃ ಹೇಳಿದ್ದಾರೆ ಆ ಸಮಯದಲ್ಲಿ ಅವರ ಬುದ್ಧಿ ಸ್ಥಿಮಿತವಾಗಿರಲಿಲ್ಲವೆಂದು. ಬರೆಯುವುದು ಮತ್ತು ಓದುವುದರಲ್ಲಿ ಶಕ್ತಿ ಬಹಳಷ್ಟು ಕ್ಷಯಿಸುತ್ತದೆ. ಆತ್ಮಸಾಕ್ಷಾತ್ಕಾರಕ್ಕಾಗಿ ಬೇಕಾದುದು ಒಂದು ಪಕ್ಕ ಉಳಿದುಬಿಡುತ್ತದೆ ಮತ್ತು ಗ್ರಂಥ ಮಧ್ಯ ಬಂದುಬಿಡುತ್ತದೆ. ನನ್ನ ದೃಷ್ಟಿಯಲ್ಲಿ ಟಾಲಸ್ಟಾಯರ ಸರ್ವೋತ್ತಮ ಕೃತಿ "ಟ್ವೆಂಟಿ ಥ್ರೀ ಟೇಲ್ಸ್", ನಾನು

ಅದನ್ನು ಪೂರ್ತಿ ಓದಿದೆ. ಟಾಲಸ್ಟಾಯ್ ಸ್ವತಃ "ನನ್ನ ಕಥೆಗಳು ಸರ್ವೋತ್ತಮ ವಾಗಿವೆ. ಅವುಗಳಲ್ಲಿ ಮೊದಲನೆ ಕಥೆ 'ಗಾಡ್ ಸೀಜ್ ದಿ ಟ್ರೂಥ್, ಬಟ್ ವೇಟ್ಸ್' ಎಂಬುದು ಎಲ್ಲಕ್ಕಿಂತ ಉತ್ತಮವಾಗಿದೆ" ಎಂದು ಹೇಳಿದ್ದಾರೆ. ನನಗೂ ಕೂಡ ಆ ಕಥೆ ಬಹಳ ಇಷ್ಟವಾಯಿತು. ಇದಕ್ಕೆ ಕಾರಣ ಟಾಲಸ್ಟಾಯ್ ಈ ರೀತಿ ಹೇಳಿದ್ದಾರೆ: ಆ ಕಥೆಗಳನ್ನು ಪೂರ್ಣವಾಗಿ ಸಹಜಭಾವದಿಂದ ಪುಟ್ಟ ಮಕ್ಕಳೂ ಅರ್ಥಮಾಡಿಕೊಳ್ಳಬಲ್ಲರು. ಶಿಕ್ಷಿತರೂ ಮತ್ತು ಅಶಿಕ್ಷಿತರಿಬ್ಬರೂ ಅರ್ಥಮಾಡಿಕೊಳ್ಳಬಲ್ಲರು. ಯಾವುದು ಸರ್ವಜನಕ್ಕೂ ಸುಲಭವೊ ಮತ್ತು ಸರ್ವಜನ ಹೃದಯಕ್ಕೂ ಮುಟ್ಟಬಲ್ಲದೋ ಅದೇ ನಿಜವಾದ ಕಲೆ."

ಟಾಲಸ್ಟಾಯುವರ ಒಂದು ಕಥೆಯಲ್ಲಿ ಈ ಮಾತು ಬರುತ್ತದೆ. ಸರ್ವೋತ್ತಮ ಕ್ಷಣಯಾವುದು? ಸರ್ವೋತ್ತಮ ಸೇವೆ ಯಾವುದು? ಸರ್ವೋತ್ತಮ ಸ್ಥಳ ಯಾವುದು? ಈ ಪ್ರಶ್ನೆಗಳಿಗೆ ಅವರ ಉತ್ತರ ಹೀಗೆ ಇತ್ತು: "ಈಗಿನ ಕ್ಷಣವೇ ಸರ್ವೋತ್ತಮ ಕ್ಷಣ. ಎದುರಿಗಿರುವ ವ್ಯಕ್ತಿಯೇ ಸರ್ವೋತ್ತಮ ಮನುಷ್ಯ. ನೀವು ನಿಂತಿರುವ ಸ್ಥಳವೇ ಸರ್ವೋತ್ತಮ ಸ್ಥಳ." ಟಾಲಸ್ಟಯ್ ಸರಿಯಾಗಿಯೇ ಹೇಳಿದ್ದಾರೆ. ಯಾವ ಕ್ಷಣದಲ್ಲಿ ಕೆಲಸ ನಡೆಯುತ್ತದೋ ಆ ಕೆಲಸಕ್ಕೆ ಅದೇ ಉತ್ತಮ ಕ್ಷಣ. ನನ್ನ ಅಧಿಕಾರ ಎಲ್ಲಿಯಾದರೂ ಇದ್ದರೆ ಅದು ಭೂತಕಾಲದ ಮೇಲಲ್ಲ; ಭವಿಷ್ಯತ್ಕಾಲದ ಮೇಲೂ ಅಲ್ಲ. ನಾನು ಯಾವ ವರ್ತಮಾನ ಕ್ಷಣ ದಲ್ಲಿ ಇದ್ದನೇಯೋ ಅದರ ಮೇಲೆ ನನ್ನ ಅಧಿಕಾರವಿದೆ.

ಭಗವದ್ಗೀತೆಯಲ್ಲಿ ಒಂದು ಶ್ಲೋಕವಿದೆ.– **ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಬ್ಬಿಷಮ್.** ಮನುಷ್ಯ ಕೇವಲ ಶಾರೀರಿಕ ಕಾರ್ಯಮಾಡಿ ದರೆ ಅವನಿಗೆ ಅದರ ಪಾಪ ತಾಗುವುದಿಲ್ಲ. ಈ ಕುರಿತು ಟಾಲಸ್ಟಾಯುರ ಒಂದು ಕಥೆಯಿದೆ. ಒಬ್ಬ ರೈತನಿದ್ದ. ಅವನ ಬಳಿ ಭೂಮಿ ಇತ್ತು. ಅವನ ಎಲ್ಲ ವ್ಯವಹಾರವೂ ಸರಿಯಾಗಿಯೇ ನಡೆಯುತ್ತಿತ್ತು. ಯಾವುದೋ ಒಂದು ಕಾರಣದಿಂದ ಅವನು ತನ್ನ ಜಮೀನನ್ನು ಕಳೆದುಕೊಂಡುಬಿಟ್ಟ. ಬೇರೆಯವರ ಹೊಲದಲ್ಲಿ ಕೂಲಿ ಮಾಡುವ ಪ್ರಸಂಗ ಬಂತು. ಒಂದೆರಡು ವರ್ಷ ಕೆಲಸ ಮಾಡಿದ ನಂತರ ಒಂದು ದಿನ ಅವನು ತನ್ನ ಹೆಂಡತಿಗೆ ಅಂದ, "ಇತ್ತೀಚೆಗೆ ನಾವು ಎಷ್ಟೊಂದು ಸುಖವಾಗಿದ್ದೇವೆ! ಇಡೀ ದಿನ ಕೆಲಸಕ್ಕೆ ಹೋಗುತ್ತೇವೆ, ಪ್ರಾಮಾಣಿಕತೆಯಿಂದ ಶ್ರಮ ಮಾಡುತ್ತೇವೆ. ಯಜಮಾನ ಕೊಟ್ಟದ್ದನ್ನು ತೆಗೆದುಕೊಳ್ಳುತ್ತೇವೆ. ಮನೆಗೆ ಬಂದು ದೇವರನ್ನು ಸ್ಮರಿಸುತ್ತೇವೆ. ಸಿಗುವ ಅಲ್ಪ ಅನ್ನವನ್ನೇ ಊಟಮಾಡುತ್ತೇವೆ. ರಾತ್ರಿ ಯಾವ ಚಿಂತೆಯೂ

೧೬ ನೇ ಪುಟಕ್ಕೆ

ಪುಸ್ತಕ ಸಂಸ್ಕೃತಿ ಉಳಿದೀತೆ?

–ಪಾಟೀಲ ಪುಟ್ಟಪ್ಪ

ವರ್ಷದ ಪ್ರತಿಯೊಂದು ದಿನವೂ ಏನಾದರೊಂದು ದಿನಾಚರಣೆ ಇದ್ದೇ ಇರುತ್ತದೆ. ವರ್ಷದುದ್ದಕ್ಕೂ ನಡದೇ ಇರುವ ಈ ವಿಧಿಗಳ ಬಗೆಗೆ ಪಾವಿತ್ರ್ಯ ಏನೂ ಉಳಿದಿಲ್ಲ.

ಈ ದಿನಾಚರಣೆಗಳಲ್ಲಿ ಕೆಲವು ನಮ್ಮ ದೇಶದ ಆಚರಣೆಗಳೂ ಇವೆ. ಇನ್ನು ಕೆಲವು ವಿಶ್ವಸಂಸ್ಥೆಯ ಆಚರಣೆಗಳಾಗಿವೆ. ಈಗ ವಿಶ್ವಸಂಸ್ಥೆಯ 'ಪುಸ್ತಕ ವರ್ಷ' ಬಂದಿದೆ. ಅದು ಈ ವರ್ಷದ ಉದ್ದಕ್ಕೂ ಆಚರಣೆಗೊಳ್ಳುತ್ತದೆ.

ಒಂದು ಕಡೆ ಟೆಲಿವಿಜನ್ ಹಾಗೂ ಇಂಟರ್‌ನೆಟ್ ಇರಿಸಿದ್ದೇವೆ. ಇನ್ನೊಂದು ಕಡೆ ಪುಸ್ತಕ ವರ್ಷ ಆಚರಿಸಬೇಕೆನ್ನುವ ಆಂದೋಲನ ನಡೆಸಿದ್ದೇವೆ.

ಮಕ್ಕಳನ್ನು ಚಿವುಟಿ ಅವರನ್ನು ಅಳಿಸುವುದೂ ನಡೆದಿದೆ. ಅದೇ ಕಾಲಕ್ಕೆ ಅವರನ್ನು ರಮಿಸಿ ಸಮಾಧಾನಪಡಿಸುವ ಪ್ರಯತ್ನವೂ ನಡೆದಿದೆ. ಪುಸ್ತಕಗ ಳೇನೋ ಪ್ರಕಟವಾಗುತ್ತಿವೆ. ಆದರೆ ಅವುಗಳನ್ನು ಓದುವ ಜನರನ್ನು ಎಲ್ಲಿಂದ ತರಬೇಕು ?

ಅನೇಕ ವರ್ಷಗಳ ಹಿಂದೆ ನಾನು ಭೆಟ್ಟಿ ಆಗಿದ್ದ ಶಿಕಾಗೋ ವಿಶ್ವವಿದ್ಯಾ ಲಯದ ಬಹು ಪರಿಣಿತ ಕುಲಪತಿ ರಾಬರ್ಟ್ ಹಚಿನ್ಸ್ ಉದ್ಗ್ರಂಥಗಳನ್ನು ಓದುವ ಜನರು ಎಲ್ಲಿದ್ದಾರೆ ಎಂದು ನನ್ನನ್ನು ಕೇಳಿದ್ದರು. ಆ ಪ್ರಶ್ನೆಗೆ ಉತ್ತರವೆಲ್ಲಿ ?

ಈ ಇಂಟರ್‌ನೆಟ್ / ಕಂಪ್ಯೂಟರ್ ಯುಗದಲ್ಲಿ ಪುಸ್ತಕಗಳನ್ನು ಓದುವ ಸಂಸ್ಕೃತಿ ಉಳಿದೀತೆ ಎನ್ನುವ ವಿವೇಚನೆ ಉಂಟಾಗಿದೆ. ಆದರೆ ಇಂಟರ್‌ನೆಟ್ ಆರಾಧಕರು ತಾಂತ್ರಿಕತೆಯ ಅಭಿವೃದ್ಧಿಯ ಬಗೆಗೆ ತಮ್ಮ ವಾಗ್ವೈಖರಿಯಿಂದ ಹೇಳಿ ನಮ್ಮನ್ನು ಮುಗ್ಧರನ್ನಾಗಿಸುತ್ತಾರೆ.

'ಹಲವು ಸಾವಿರ ಪುಸ್ತಕಗಳನ್ನು ಒಂದು ಸಣ್ಣ ಡಿಸ್ಕ್‌ನಲ್ಲಿ ಸೇರಿಸಿಬಿಡ ಬಹುದು' ಎನ್ನುವ ಮಾತನ್ನು ಅವರ ಬಾಯಿಂದ ಕೇಳಿದ ನಮಗೆ ಕೌತುಕ ವೆನಿಸುತ್ತದೆ. ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಸಂಗ್ರಹಿಸಿ ಇಡುವ ಸ್ಥಳದ ಕೊರತೆ ಇದರಿಂದ ಖಂಡಿತವಾಗಿಯೂ ನಿವಾರಣೆಗೊಳ್ಳುತ್ತದೆ. ಆದರೆ ಆ ಡಿಸ್ಕ್ ಗಳಲ್ಲಿ ಶೇಖರಿಸಿಟ್ಟ ಜ್ಞಾನ ಮನುಷ್ಯನ ಮಸ್ತಕಕ್ಕೆ ಬರುವ ಬಗೆ ಹೇಗೆ ? ಮಸ್ತಕಕ್ಕೆ ಏರದ ಪುಸ್ತಕವು ಪುಸ್ತಕವೇ ಅಲ್ಲ. ಪುಸ್ತಕ ವಾಚನದಿಂದ ಬರುವ

ಆನಂದವನ್ನು ಈ ಇಂಟರ್‌ನೆಟ್ ಒದಗಿಸಿಕೊಡಬಲ್ಲದೇ ?

ಅದನ್ನು ಹೇಗೆ ಓದಬಹುದೆನ್ನುವ ನಮ್ಮ ಸಂದೇಹಕ್ಕೆ ವಿಜ್ಞಾನವು ನಮಗೆ ಉತ್ತರವನ್ನು ಒದಗಿಸಿಕೊಡುತ್ತದೆ.

ಈ ಡಿಸ್ಕ್‌ಗಳಲ್ಲಿ ಸಂಗ್ರಹಿಸಿ ಇರಿಸಿರುವ ಜ್ಞಾನವನ್ನು ಓದಿ ತಿಳಿದು, ನಮ್ಮದನ್ನಾಗಿ ಮಾಡಿಕೊಳ್ಳುವ ಸಾಧನವನ್ನು ಮಾಹಿತಿ ತಂತ್ರಜ್ಞಾನ ನಮಗೆ ಒದಗಿಸಿಕೊಟ್ಟಿದೆ. ಸೂಕ್ಷ್ಮಾತಿಸೂಕ್ಷ್ಮ ರೀತಿಯಿಂದ ಡಿಸ್ಕ್‌ನಲ್ಲಿ ಶೇಖರಿಸಿ ಇರಿಸಿರುವ ಜ್ಞಾನವನ್ನು ನಾವು ದೊಡ್ಡ ಕಂಪ್ಯೂಟರ್ ಪರದೆಯ ಮೇಲೆ ಓದಿ ನಮ್ಮದಾಗಿಸಿಕೊಳ್ಳಬಹುದು. ಆದರೆ ಕಂಪ್ಯೂಟರ್ ಪರದೆ ಪುಸ್ತಕವಲ್ಲ. ಆ ಪರದೆಯನ್ನು ಪುಸ್ತಕದಂತೆ ನಮ್ಮೊಂದಿಗೆ ಒಯ್ಯಲಾಗುವುದಿಲ್ಲ.

ಅದನ್ನು ಓದಲು ನಾವು ಅದರ ಎದುರು ತಪಸ್ಸು ಮಾಡುವವರಂತೆ ಕುಳಿತಿರಬೇಕಾಗುತ್ತದೆ. ಓದುವ ಆ ಪರದೆಯನ್ನು ಆಧುನಿಕ ತಾಂತ್ರಿಕತೆ ನಮಗೆ ಒದಗಿಸಿಕೊಡುತ್ತದೆ; ಆ ಸ್ಕ್ರೀನ್ ಒಂದಕ್ಕೆ ನಾವು ಮೂವತ್ತು ನಲವತ್ತು ಸಾವಿರ ರೂಪಾಯಿಗಳನ್ನು ತೆರಬೇಕಾಗುತ್ತದೆ. ಆದರೆ ನೀವು ಆ ಡಿಸ್ಕನಲ್ಲಿ ತುಂಬಿರಿಸಿದ ಪುಸ್ತಕಗಳನ್ನು ಓದಬೇಕಾದರೆ, ಕಂಪ್ಯೂಟರ್ ಮುಂದೆ ಕುಳಿತು ಅದರ ಸ್ಕ್ರೀನ್ ಮೇಲೆಯೇ ಸದಾ ಕಣ್ಣಿಟ್ಟು ಕುಳಿತಿರಬೇಕಾಗುತ್ತದೆ. ಹಾಗಾದರೆ ನಿಮ್ಮ ಕಣ್ಣುಗಳ ಗತಿ ಏನಾಗಬೇಕು ?

ಮನುಷ್ಯ ಚೈತನ್ಯವು ಇದುವರೆಗೆ ನೂರಾರು ವರ್ಷಗಳಿಂದ ಸಂಪಾದಿಸಿದ ಜ್ಞಾನದ ಉತ್ತರಾಧಿಕಾರಿಯಾಗಿ ಮನುಷ್ಯನು ಬದುಕಬಹುದು. ಸಿದ್ಧಾಂತರೂಪವಾಗಿ ಇದೆಲ್ಲವೂ ಸರಿ. ಆದರೆ ಇದು ಆಗುವಂಥ ಮಾತೇನು ?

ಪುಸ್ತಕ ಓದುವುದರಿಂದ ನಮಗೇನು ಆನಂದ ಲಭಿಸುವುದೇ, ಆ ಆನಂದ ಕಂಪ್ಯೂಟರ್ ಓದಿನಿಂದ ಸಿಗದು.

ನೀವು ಪುಸ್ತಕವನ್ನು ಎಲ್ಲಿ ಬೇಕಾದರಲ್ಲಿ ಓದಬಹುದು. ಪುಸ್ತಕದಂತೆ ಕಂಪ್ಯೂಟರ್ ನಿಮ್ಮೊಂದಿಗೆ ಬರಲಾರದು. ವಿದ್ಯುತ್ತಿನ ನೆರವು ನಿಮಗೆ ಸಿಕ್ಕುವುದಿಲ್ಲ. ಎಲ್ಲಿ ಕುಳಿತು ಓದಬೇಕೆಂದರೂ ಪುಸ್ತಕಗಳು ನಿಮ್ಮ ಬಳಿ ಇದ್ದೇ ಇರುತ್ತದೆ. ನೀವು ಅವುಗಳನ್ನು ರೈಲಿನಲ್ಲಿ ಬಸ್ಸಿನಲ್ಲಿ ಊಟದ ಮೇಜಿನ ಮೇಲೆ ಕುಳಿತಾಗ, ಹಾಸುಗೆಯಲ್ಲಿ ಅಡ್ಡವಾದಾಗ ಅಷ್ಟೇ ಏಕೆ, ಟಾಯ್‌ಲೆಟ್‌ಗೆ ಹೋದಾಗ ನಿಮಗೆ ಹೇಗೆ ಅನಿಸುವುದೋ ಆ ರೀತಿ ಓದಬಹುದು.

ನೀವು ಓದುವುದು ಪುಸ್ತಕವಾದರೆ, ಅದು ಕಾವ್ಯ ಇರಬಹುದು. ಕತೆ, ಕಾದಂಬರಿ ಇರಬಹುದು. ಇಲ್ಲವೆ ಬೇರೆ ಮನೋವಿಜ್ಞಾನ ಇರಬಹುದು;

ಅದರಲ್ಲಿ ನಿಮಗೆ ತಟ್ಟಿದ ಮಾತನ್ನು ನೀವು ಗುರುತು ಮಾಡಿ ಇಡಬಹುದು. ನಿಮ್ಮ ಸ್ನೇಹಿತರು ನಿಮ್ಮ ಮನೆಗೆ ಬಂದಾಗ ಅವರಿಗೆ ಅದನ್ನು ಓದಿ ಹೇಳಿ, ಅವರೊಂದಿಗೆ ನಿಮ್ಮ ಆನಂದವನ್ನು ಹಂಚಿಕೊಳ್ಳಬಹುದು.

ಪುಸ್ತಕವನ್ನು ಓದುವುದರಲ್ಲಿ ಇರುವ ಆನಂದವನ್ನು ಇಂಟರ್‌ನೆಟ್ ಆಗಲಿ ಕಂಪ್ಯೂಟರ್ ಆಗಲಿ ತಂದುಕೊಡುವುದು ಸಾಧ್ಯವಿಲ್ಲ. ಆಧುನಿಕ ತಾಂತ್ರಿಕತೆಯು ಡಿಸ್ಕ್‌ನಲ್ಲಿ ಜ್ಞಾನವನ್ನು ಸಂಗ್ರಹಿಸಿ ಇಡುವ ಒಂದು ಅದ್ಭುತ ಸಾಧನ ಅಷ್ಟೇ. ಆದರೆ ಅದು ಪುಸ್ತಕದ ಸಂತೋಷವನ್ನು ತಂದುಕೊಡಲಾರದು. ಕಾವ್ಯಶಾಸ್ತ್ರಗಳನ್ನು ಓದುವುದರಿಂದ ಬರುವ ಸಂತೋಷವನ್ನು ಕಂಪ್ಯೂಟರ್ ಆಗಲಿ, ಮಾಹಿತಿ ತಂತ್ರಜ್ಞಾನವಾಗಲಿ ತಂದುಕೊಡುವುದಿಲ್ಲ.

ವಿಜ್ಞಾನ ಅಭಿವೃದ್ಧಿಗೊಳ್ಳುತ್ತಲೇ ಮನುಷ್ಯನ ಭೌತಿಕ ಅವಶ್ಯಕತೆಗಳನ್ನು ಪೂರೈಸಿಕೊಡುತ್ತದೆ. ಆದರೆ ಅದು ಮಾನವತೆಯ ಕ್ಷಿತಿಜಗಳನ್ನು, ಆಧ್ಯಾತ್ಮಿಕ ಅವಶ್ಯಕತೆಗಳನ್ನು ವಿಸ್ತರಿಸಿ ಅವನ ಬೌದ್ಧಿಕ ಹಸಿವನ್ನು ಹಿಂಗಿಸುವುದಿಲ್ಲ.

ಹೆಚ್ಚು ಹೆಚ್ಚು ವಿಜ್ಞಾನ ಬಂದಂತೆಲ್ಲ ಮನುಷ್ಯನಲ್ಲಿಯ ಕಲೆಯ ಭಾಗ ಕಡಿಮೆ ಆಗಿ ಅವನು ಒಂದು ರೋಬೋಟ್ ಆಗಿ ಪರಿಣಮಿಸುತ್ತಾನೆ. ಹೆಚ್ಚು ಜ್ಞಾನ ಸಂಪಾದಿಸಿಕೊಳ್ಳಬೇಕೆನ್ನುವ ಹುಚ್ಚಿಗೆ ಬಿದ್ದು ಅವನು ತಾಂತ್ರಿಕತೆಯಲ್ಲಿಯೇ ಮಗ್ನನಾಗಿ, ಪುಸ್ತಕ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಾನೆ. ಜ್ಞಾನವೆಂದರೆ ವಿಜ್ಞಾನವೊಂದೇ ಎಂದು ಅವನ ಭಾವನೆ ಆಗಿರುತ್ತದೆ. ವಿಜ್ಞಾನ ಒಂದನ್ನು ಬಿಟ್ಟು ಬೇರೆ ಪುಸ್ತಕಗಳು ಅವಶ್ಯಕವೆಂದು ಅವನಿಗೆ ಅನಿಸುವುದಿಲ್ಲ.

ಈಗ ಎಲ್ಲರೂ ವಿಜ್ಞಾನವನ್ನು ಹಿಡಿದು, ತಾಂತ್ರಿಕ ದಾರಿಯನ್ನು ತುಳಿಯತೊಡಗಿದ್ದಾರೆ. ಅವರು ಓದಿದರೆ ವಿಜ್ಞಾನ ತಂತ್ರಜ್ಞಾನದ ಪುಸ್ತಕಗಳನ್ನೇ ಓದುತ್ತಾರೆ. ಮನುಷ್ಯನನ್ನು ಸಂಸ್ಕಾರಗೊಳಿಸುವ ಸಾಹಿತ್ಯ ಅವರಿಗೆಲ್ಲಿ ಬೇಕಾಗಿದೆ?

ಮಾಹಿತಿ ತಂತ್ರಜ್ಞಾನವನ್ನು ಜಪಿಸುತ್ತಿರುವ ಜನರ ಮನೆಗೆ ಹೋಗಿ ನೋಡಿದರೆ ಈ ಮಾತು ವೇದ್ಯವಾಗುತ್ತದೆ. ಅವರ ಮನೆಯಲ್ಲಿ ಮನಸ್ಸಿಗೆ ಸಂಸ್ಕಾರ ಕೊಡುವ ಪುಸಕ್ತಗಳೇ ಕಾಣಿಸುವುದಿಲ್ಲ. ಓದಿದ ಜನರು ಮನುಷ್ಯನನ್ನು ಬೆಳೆಸುವ ಸಾಹಿತ್ಯಕ್ಕೆ ಎರವಾಗಿ, ಸುಶಿಕ್ಷಿತ ನಿರಕ್ಷರಿಗಳೆನಿಸತೊಡಗಿದ್ದಾರೆ.

ಅವರೇನೋ ಪರಿಶುದ್ಧ ವಿಜ್ಞಾನದ ಬೆನ್ನು ಹತ್ತಿ ಹೊರಟಿರುತ್ತಾರೆ. ಆದರೆ ಜ್ಞಾನದ ಸಮಗ್ರತೆಯ ದೃಷ್ಟಿ ಅವರಿಗೆ ಇರುವುದಿಲ್ಲ. ಜ್ಞಾನದ ಹೆಸರಿನಲ್ಲಿ ಶುಷ್ಕತೆಯ ಬೆನ್ನು ಹತ್ತಿ ಅವರು ಮಾನವತೆಯ ಬೆಳಕು ಇಲ್ಲದ ಭೌತಿಕ

ಬ್ರಹ್ಮನ ಹಾಳು ಹೊಂಡಕ್ಕೆ ಹೋಗಿ ಬೀಳುತ್ತಿರುವ ಚಿತ್ರ ನಮ್ಮ ಕಣ್ಣಿಗೆ ಕಾಣುತ್ತಿದೆ.

ಮಾಹಿತಿ ತಂತ್ರಜ್ಞಾನದ ಹೆಸರಿನಲ್ಲಿ ಮನುಷ್ಯನು ತನ್ನನ್ನು ಉನ್ನತಿಗೇರಿಸಿ, ತನಗೆ ಉದಾತ್ತತೆಯನ್ನು ತಂದುಕೊಡುವ ಪುಸ್ತಕ ಸಂಸ್ಕೃತಿಗೆ ಎರವಾಗಿ. 'ಕಡಿಮೆ ಮಾನವ' ಎನ್ನುವ ಹೀನಾಯವನ್ನು ತಂದುಕೊಳ್ಳಬೇಕು.

ನಮಗೆ ವಿಜ್ಞಾನ ಬೇಕು. ಆದರೆ ಅದು ಪುಸ್ತಕ ಸಂಸ್ಕೃತಿಯನ್ನು ಹಾಳುಮಾಡಿ, ಮನುಕುಲವನ್ನು ಆಧುನಿಕ ಅಜ್ಞಾನದ ಕೊಳ್ಳಕ್ಕೆ ತಳ್ಳಬಾರದು. ★

ಟಾಲ್‌ಸ್ಟಾಯ್ ೧೨ ನೇ ಪುಟದಿಂದ

ಇರುವುದಿಲ್ಲ. ಆದರೆ ನಾವೇ ಯಜಮಾನರಾಗಿದ್ದಾಗ ನಮಗೆ ಎಷ್ಟು ಚಿಂತೆಯಿತ್ತು? ರಾತ್ರಿಯಿಡೀ ಎಚ್ಚರವಾಗಿರಬೇಕಾಗುತ್ತಿತ್ತು. ನಾಳೆ ಯಾರಿಗೆ ಯಾವ ಕೆಲಸ ಕೊಡಬೇಕೆಂಬ ಚಿಂತೆ ಇರುತ್ತಿತ್ತು. ಕೆಲಸ ಸರಿಯಾಗಿ ಆಗದಿದ್ದರೆ ಕೋಪ ಬರುತ್ತಿತ್ತು. ದ್ವೇಷ, ಜಗಳ ಕೂಡ ಆಗುತ್ತಿತ್ತು. ಆಗ ಹೆಚ್ಚು ಹಣ ಸಿಗುತ್ತಿತ್ತು. ಈಗ ಕಡಿಮೆ ಸಿಗುತ್ತದೆ. ಆದರೆ ಈಗ ಎಷ್ಟು ಶಾಂತಿ ಇದೆ. ಧನ್ಯ ನಮ್ಮ ಜೀವನ!" ಹೆಂಡತಿ ಉತ್ತರಕೊಟ್ಟಳು, "ನಿಮ್ಮ ಮಾತು ನಿಜ, ಈಗ ನಾವು ಇರುವಷ್ಟು ಸುಖಿ ಆಗ ಇರಲಿಲ್ಲ". ಕಥೆಯ ರೂಪವಲ್ಲಿ ಟಾಲಸ್ಟಾಯ ಈ ಮಾತನ್ನು ಹೇಳಿದ್ದಾರೆ. ಕೇವಲ ಶರೀರದಿಂದ ಕೆಲಸಮುಗಿದು ಹೋಗುತ್ತದೆ. ಒಂದುವೇಳೆ ಅದನ್ನೇ ಪ್ರಾಮಾಣಿಕತೆಯಿಂದ ಮಾಡಿದಲ್ಲಿ ಅದರಿಂದ ಪೂರ್ಣ ಸೇವೆಯಾಗುವುದು. ಅವನು ತನ್ನ ಕೆಲಸ ಮಾಡುತ್ತಾನೆ ಮತ್ತು ಮುಕ್ತನಾಗುತ್ತಾನೆ. ಅವನು ಬ್ರಹ್ಮವಿದ್ಯೆಯ ಕಡೆಗೆ ಹೆಚ್ಚು ಸರಳತೆಯಿಂದ ಹೋಗಬಲ್ಲ.

ಟಾಲಸ್ಟಾಯ ಎಷ್ಟೋ ವರ್ಷಗಳ ಹಿಂದೆ ಒಂದು ಪುಸ್ತಕ ಬರೆದಿದ್ದರು. "ಭೂಮಿ ಮೇಲಿನ ಒಡೆತನ ಅಳಿಸಿ ಹೋಗಬೇಕು" ಎಂದು ಅದರಲ್ಲಿ ಹೇಳಿದ್ದರು. ಆ ವರ್ಷವೇ ನನ್ನ ಜನ್ಮವಾಗಿತ್ತು. ಅವರು ಈ ಮಾತನ್ನು ಬರೆದು ತಮ್ಮ ಇಚ್ಛೆಯನ್ನು ನನ್ನಲ್ಲಿ ತುಂಬಿರಬಹುದೆಂದು ನಾನು ಭಾವಿಸುತ್ತೇನೆ. ★

ಮೈತ್ರಿ ಸಾಭಾರ (ಅನು : ಸು.ಕೌ.)

ಪುಸ್ತಕ ಸಂಸ್ಕೃತಿ ಉಳಿದೀತು!

– ನಾಗೇಶ ಹೆಗಡೆ

(ಇದೇ ಸಂಚಿಕೆಯಲ್ಲಿ ಬೇರೆಡೆಗೆ ಪ್ರಕಟವಾಗಿರುವ ಶ್ರೀ ಪಾಟೀಲ ಪುಟ್ಟಪ್ಪನವರ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಈ ಲೇಖನವಿದೆ. –ಸಂ)

'ಪುಸ್ತಕ ಸಂಸ್ಕೃತಿ ಉಳಿದೀತೆ?' ಎಂಬ ಲೇಖನದಲ್ಲಿ ಡಾ. ಪಾಟೀಲ ಪುಟ್ಟಪ್ಪನವರು ಮಂಡಿಸಿದ ವಾದ ಎಂದಿನ ಅವರ ಪ್ರಬುದ್ಧ ಪ್ರಬಂಧಗಳಂತಿರದೆ ಗುರಿತಪ್ಪಿ ಎಲ್ಲೆಲ್ಲೊ ಡಿಕ್ಕಿ ಹೊಡೆಯುತ್ತ ಸಾಗಿದೆ. ಓದುವ ಸಂಸ್ಕೃತಿ ಈಚೆಗೆ ಕಮ್ಮಿಯಾಗಿದ್ದಕ್ಕೆ ಇಂಟರ್‌ನೆಟ್ ಮತ್ತು ಕಂಪ್ಯೂಟರ್‌ಗಳೇ ಕಾರಣವೆಂದೂ, ಬಸ್ಸಿನಲ್ಲಿ, ಹಾಸಿಗೆಯಲ್ಲಿ ಈ ಯಂತ್ರಗಳನ್ನು ಓದಲೂ ಸಾಧ್ಯವಿಲ್ಲವೆಂದೂ ಉದ್ದಕ್ಕೂ ಅವರು ವಾದಿಸಿದ್ದಾರೆ.

ಓದ ಬಯಸುವವನಿಗೆ ಈಗ ಅಡ್ಡಿ ಆಗಿದ್ದು ಕಂಪ್ಯೂಟರ್‌ಗಳು ಅಲ್ಲವೇ ಅಲ್ಲ. ಪುಸ್ತಕಗಳೇ ಅಡ್ಡಿ! ಜನರು ಈಗ ಟೀವಿಯ ಮೂಲಕ ಜಗತ್ತಿನ ಎಲ್ಲ ಆಗುಹೋಗುಗಳನ್ನು ವೀಕ್ಷಿಸುತ್ತಾರೆ. ತಾವು ನೋಡುತ್ತಿರುವ ವಿದ್ಯಮಾನಗಳ ಹಿನ್ನೆಲೆಯನ್ನು ಅರಿಯಬೇಕೆಂಬ ಕಾತುರ ಅವರಿಗಿದ್ದರೂ ಆ ಕುತೂಹಲವನ್ನು ತಣಿಸುವ ಆಸಕ್ತಿದಾಯಕ ಗ್ರಂಥಗಳು ಎಲ್ಲಿವೆ? ಎಷ್ಟಿವೆ?

ನಮ್ಮ ಪ್ರಾಧಿಕಾರಗಳು, ಅಕಾಡೆಮಿ, ಪರಿಷತ್ತುಗಳು, ವಿಶ್ವವಿದ್ಯಾಲಯಗಳು ಬೆನ್ನಿಗೆ ಕಣ್ಣುಗಳಿದ್ದಂತೆ ಹಿಂದಿನ ಕಾಲದ ಸಂಗತಿಗಳನ್ನೇ ಚರ್ವಿತಚರ್ವಣಮಾಡುತ್ತವೆ ವಿನಾ ಈಗಿನ ಜಗತ್ತನ್ನು, ಆಚಿನ ಜಗತ್ತನ್ನು ತೋರಿಸಬಲ್ಲ ಎಷ್ಟು ಗ್ರಂಥಗಳನ್ನು ಪ್ರಕಟಿಸುತ್ತಿವೆ? ಖಾಸಗಿ ಪ್ರಕಾಶಕರೊ ಪುಸ್ತಕದ ಬೆಲೆಯನ್ನು ಮೂರು-ನಾಲ್ಕು ಪಟ್ಟು ಹೆಚ್ಚಿಗೆ ಇಟ್ಟು ಗ್ರಂಥಾಲಯಗಳಿಗೆ ೪೫೦ ಪ್ರತಿಗಳನ್ನು ಸಾಗಹಾಕಿ ಮುಂದೆ ಸಾಗುವ ಪ್ರವೃತ್ತಿಯವರೇ ಹೆಚ್ಚಿದ್ದಾರೆ. ಆ ಕೆಲಸಕ್ಕೆ ನೆರವಾಗುವ ಮಧ್ಯವರ್ತಿಗಳಿಗೆ ನೀಡುವ 'ಸಂಭಾವ'ನೆಯ ಒಂದಂಶವನ್ನು ಯೋಗ್ಯ ಲೇಖಕರಿಗೆ ನೀಡಿದ್ದರೆ ಓದುವ ಆಸಕ್ತಿ ಇದ್ದವರಿಗೆ ಉತ್ತಮ ಪುಸ್ತಕಗಳು ಸಿಗಬಹುದಿತ್ತು. ಜಗತ್ತಿನ ಎಲ್ಲಾ ಬಗೆಯ ಭೋಗ ವಸ್ತುಗಳಿಗೆ ಜಾಹೀರಾತುಗಳಿದ್ದಂತೆ ಪುಸ್ತಕಗಳಿಗೆ ಯಾಕೆ ಇಲ್ಲ? ಪತ್ರಿಕೆಗಳಲ್ಲಿ ಉಚಿತವಾಗಿ 'ಸಾದರ ಸ್ವೀಕಾರ'ದಲ್ಲಿ ಹೆಸರು ಪ್ರಕಟವಾದರೆ ಬೇಕಷ್ಟಾಯಿತು ಎಂಬ ಧೋರಣೆ ಪ್ರಕಾಶಕರದ್ದಲ್ಲವೆ?

ಮಾಹಿತಿಕ್ರಾಂತಿಯನ್ನೂ ನಾವು ಟೀಕಿಸಬೇಕಿಲ್ಲ. ಎಲ್ಲ ಓದುಗರ ಆಸಕ್ತಿಯನ್ನೂ ತಣಿಸಬಲ್ಲ ಮಹಾ ಮಾಹಿತಿ ಸಮುದ್ರವೇ ಇಂಟರ್‌ನೆಟ್‌ನಲ್ಲಿ ಈಗೀಗ

ಸಿಗತೊಡಗಿದೆ. ಅವನ್ನು ಸಂಸ್ಕರಿಸಿ, ಭಾಷಾಂತರಿಸಿ, ಮುದ್ರಿತ ರೂಪಕ್ಕೆ ತರಬಲ್ಲ ಬರಹಗಾರರು, ಪ್ರಕಾಶಕರು ಬೇಕಿದ್ದಾರೆ. ಅಂದಹಾಗೆ, ಆಗ ನಾವು ಕಂಪ್ಯೂಟರನ್ನೂ ಟೀಕಿಸಬೇಕಿಲ್ಲ. ಈಗ ಬಸ್‌ನಲ್ಲೂ, ಹಾಸಿಗೆಯಲ್ಲೂ ಒಯ್ದು ಓದಬಹುದಾದ ಇ-ಗ್ರಂಥಗಳು ಬರತೊಡಗಿವೆ. ಅದರಲ್ಲಿ ಮುದ್ರಿತ ಪುಸ್ತಕದ ಎಲ್ಲಾ ಅನುಕೂಲಗಳಿರುತ್ತವೆ: ಅದರಿಂದ ಗಾಳಿ ಹಾಕಿಕೊಳ್ಳಬಹುದು, ಮಳೆ ಬಂದಾಗ ತಲೆಗೆ ಒಡ್ಡಬಹದು. ಪುಟದ ಮಧ್ಯೆ ಗೆಗೆ ಹಾಕಿ, ಗರಿ ಇಟ್ಟು ಮುಚ್ಚಿ ಮಲಗಬಹುದು: ಇ-ಲೈಬ್ರರಿಗೆ ಹೋಗಿ ಹೊಸ ಗ್ರಂಥವನ್ನು ಅದರಲ್ಲೇ ತುಂಬಿಸಿ ತರಬಹುದು. ಜತೆಗೆ, ಅದನ್ನು ಕತ್ತಲಲ್ಲೂ ಓದಬಹುದು! ಒಂದು ಮಾತ್ರ ಸಾಧ್ಯವಿಲ್ಲ, ಪರಿಷನ್ಮಂದಿರದ ಗೋದಾಮಿನಲ್ಲಿ ರಾಶಿ ಬಿದ್ದ ಗ್ರಂಥಗಳಂತೆ ಅವನ್ನು ಗೆದ್ದಲು ತಿನ್ನುವುದಿಲ್ಲ, ಮೂಸಿ ನೋಡುವುದಿಲ್ಲ.

ಪಾಟೀಲ ಪುಟ್ಟಪ್ಪನವರು ಬಿಡಿ ಲೇಖನಗಳ ರೂಪದಲ್ಲಿ ತಮ್ಮ ಅನನ್ಯ ಶೈಲಿಯಲ್ಲಿ ಗುಡುಗುತ್ತಾರೆ. ಅವರಂಥ ಮಹನೀಯರು ಮಿಂಚು - ಬೆಳಕನ್ನೂ ಮಿನುಗಿಸಬಲ್ಲ ಪುಸ್ತಕ ಬರೆಯುವುದಾದರೆ ಪುಸ್ತಕ ಸಂಸ್ಕೃತಿ ಉಳಿಯುತ್ತದೆ. ★

(ಪ್ರಜಾವಾಣಿ ಸಾಭಾರ)

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ – ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/– ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/– ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಮ್ರ ಕೋರಿಕೆ.

–ಪ್ರಕಾಶಕರು

ಮತಾಂಧ ತಾಲಿಬಾನ್ ಸಾಧಿಸಿದ್ದೇನು ?

–ಸತ್ಯವ್ರತ

ಗಾಂಧಿ–ವಿನೋಬಾ ಅವರ ವಿಚಾರದಲ್ಲಿ ನಂಬಿಕೆ ಇರುವವರಿಗೆ ಸರ್ವ ಧರ್ಮ ಸಮಾನತೆ ಹನ್ನೊಂದು ವ್ರತಗಳಲ್ಲೊಂದು. ಧರ್ಮಾಂಧರ ತೋಪುಗಳ ಕಿವಿಗಡಚಿಕ್ಕುವ ಅಬ್ಬರ ಆರ್ಭಟದಲ್ಲಿ ಗಾಂಧಿ ವಿನೋಬಾ ಅವರ ಧರ್ಮ ಸಮನ್ವಯದ ಆದರ್ಶ ಮತ್ತು ಸಂದೇಶ ಎಲ್ಲಿಯೋ ಅಡಗಿ ಹೋದಂತೆ ಕಂಡುಬರುತ್ತಿದೆ. ಜಗತ್ತಿನ ಬಹುಮುಖ್ಯ ಮತಧರ್ಮಗಳು ತಮ್ಮ ಧರ್ಮಾನುಯಾಯಿಗಳ ಸಂಖ್ಯೆಯನ್ನು ಬೆಳೆಸಿಕೊಳ್ಳುವ ಗಂಭೀರ ಪ್ರಯಾಸ ದಲ್ಲಿವೆ, ತಮ್ಮ ಮತಧರ್ಮ ಒಂದೇ ಜಗತ್ತಿನ ತುಂಬ ಹರಡಿ ಬಿಡಬೇಕು, ತಮ್ಮ ಧರ್ಮವೊಂದೇ ವಿಶ್ವಧರ್ಮವೆನಿಸುವಂತಾಗಬೇಕು ಎಂಬ ದಿವ್ಯ ಕನಸನ್ನು ಈ ಧರ್ಮಗಳವರು ಕಾಣುತ್ತಿದ್ದಾರೆ. ಅದು ನನಸಾಗುವಂತೆ ಮಾಡಲು ಎಲ್ಲ ಪ್ರಯತ್ನವನ್ನೂ ಮಾಡುತ್ತಿದ್ದಾರೆ. ಶಾಸ್ತ್ರ, ಶಸ್ತ್ರ, ಧನ, ಪ್ರಚಾರ ಮುಂತಾಗಿ ಶಕ್ತಿ ಪ್ರಯೋಗ ಮಾಡಿಯಾದರೂ ತಮ್ಮ ಧರ್ಮಾನುಯಾಯಿಗಳ ಸಂಖ್ಯೆ ಬೆಳೆಯಬೇಕೆಂಬ ಹಂಬಲ ಇವರದು. ಈ ಕುತ್ಸಿತ – ಕುರುಡು ನಾಗಾಲೋಟ ದಲ್ಲಿ ತೊಡಗಿರುವ ಸ್ವಯಂ ನಿಯುಕ್ತ ಮತ್ತು ಸ್ವಯಂ ಘೋಷಿತ ಮತ ಧರ್ಮ ಪರಿಪಾಲಕರಿಗೆ ಗಾಂಧಿ–ವಿನೋಬಾರವರ ಧರ್ಮ ಸಮನ್ವಯದ ಮಾತು ಹೇಗೆ ಹಿಡಿಸೀತು?

ಒಂದು ಕಡೆ ಅಫ್ಘಾನಿಸ್ಥಾನದಲ್ಲಿ ಪುರಾತನ ಕಾಲದ ಬುದ್ಧನ ಪ್ರತಿಮೆ ಗಳನ್ನು ಇಸ್ಲಾಮೇತರ ಸಂಕೇತಗಳೆಂದು ಅವಕ್ಕೆ ತಮ್ಮ ದೇಶದಲ್ಲಿ ಸ್ಥಾನ ವಿಲ್ಲವೆಂದು ತಾಲಿಬಾನ್ ಅವನ್ನು ನಾಶ ಮಾಡುವ ಅಭಿಯಾನದಲ್ಲಿ ತೊಡಗಿ ರಲಿ; ಇನ್ನೊಂದೆಡೆ, ರೋಮನ್ ಕ್ಯಾಥೋಲಿಕ್ ಚರ್ಚ್ ತನ್ನ ಕ್ಲಿಷ್ಟ, ಬಹು ಮಹತ್ವಪೂರ್ಣ ೩೬ ಪುಟಗಳ ದಾಖಲೆ ಪತ್ರವಾದ "On the Unity and salvific Univeasality of Jesus christ and the Church" (Preparee by the Vatican Guardian of Orthodoxy The Hindu dated 7–9–2000) ನಲ್ಲಿ ಧರ್ಮ ಸಮಾನತೆಯ ವಿಚಾರವನ್ನು ತಿರಸ್ಕರಿಸಲಿ; ಮತ್ತೊಂದೆಡೆ ಹಿಂದೂ ರಾಷ್ಟ್ರವಾದಿಗಳೂ ಸಂಘ ಪರಿವಾರವೂ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟು ವುದು ರಾಷ್ಟ್ರೀಯ ಭಾವನಾತ್ಮಕತೆಯ ಸಂಕೇತವೆನ್ನಲಿ; ಇತಿಹಾಸಕಾರನೊಬ್ಬ ಶಾಜಮಹಲ್ ಹಿಂದೂ ಸ್ಮಾರಕ (ಮಾನ್ಯುಮೆಂಟ್) ಎಂದು ಸಾರುತ್ತಾ ಹೋಗಲಿ;

ಈ ಎಲ್ಲರೂ ಪರಸ್ಪರರ ಮೇಲೆ ಆರೋಪ - ಪ್ರತ್ಯಾರೋಪದಲ್ಲಿ ನಿರತರಾಗಿರಲಿ. ತಮ್ಮ ತಮ್ಮ ದೇಶಗಳ ಪೂರ್ವೇತಿಹಾಸವನ್ನೇ ಅಳಿಸಿಹಾಕುವ ಪ್ರಯತ್ನ ನಡೆಸುತ್ತಿರಲಿ. ಇವರೆಲ್ಲರ ನೂಕುನುಗ್ಗಲಿನಲ್ಲಿ ಗಾಂಧಿ-ವಿನೋಬಾ ಅವರ ಸರ್ವ ಧರ್ಮ ಸಮಾನತ್ವದ ವಿಚಾರ ಅವರ ಕಾಲ್ತುಳಿತಕ್ಕೆ ಸಿಕ್ಕಿ ನುಚ್ಚುನೂರಾಗುವ ಭಯಉಂಟುಮಾಡಿದೆ. ಗಾಂಧಿ-ವಿನೋಬಾ ಎಲ್ಲ ಧರ್ಮಗಳನ್ನು ಒಂದು ಮಾಡಿಸುವ ಅವ್ಯಾಹತ ಪ್ರಯತ್ನಮಾಡುತ್ತಿದ್ದಾರೆ, ಈ ಎಲ್ಲರೂ ಧರ್ಮಗಳನ್ನು ಒಡೆಯುವ ಕಾರ್ಯ ವನ್ನು ಭರದಿಂದ ಸಾಗಿಸುತ್ತಿದ್ದಾರೆ. ಪರಿಣಾಮವೇನಾದೀತು ? ಧರ್ಮ ಸಹಿಷ್ಣುತೆ, ಧರ್ಮ ಸಮನ್ವಯದಂಥ ಉನ್ನತ ವಿಚಾರಗಳ ಬಲಿ ತಾನೆ ?

ಭಗವಾನ್ ಬುದ್ಧನ ಪ್ರತಿಮೆಗಳನ್ನು ನಾಶಪಡಿಸಿ ತಾಲಿಬಾನ್ ಸಾಧಿಸಿದ್ದೇನು ? ಬುದ್ಧನನ್ನು ಅವಮಾನಗೊಳಿಸಿದ್ದೇ ? ಹೀಗೆಂದು ಯಾರೋ ಹೇಳಿದ್ದಾರೆ, ಮಾನಾಪಮಾನ, ನಿಂದಾ-ಸ್ತುತಿ, ಸ್ನೇಹ-ವೈರ, ನಾಶ-ಅವಿನಾಶ ಮುಂತಾದ ದ್ವಂದ್ವಗಳನ್ನು ಮೆಟ್ಟಿದಂತೆ, ದ್ವಂದ್ವಾತೀತ ಸ್ಥಿತಿಗೇರಿದ ಬುದ್ಧನಿಗೆಂಥ ಅಪಮಾನವಾದೀತು ?

ನ ಹಿ ವೇರೇನ ವೇರಾನಿ ಸಮ್ಮಂತೀಧ ಕುದಾಚನ ಅವೇರೇನ ಚ ಸಮ್ಮಂತಿ ಏಸ ಧಮ್ಮೋಸನಂತನೋ ॥

ಎಂದು ಸಾರಿದ ಬುದ್ಧನಿಗೆಂಥ ಅಪಮಾನ ತಟ್ಟೀತು ? ದ್ವಂದ್ವಾತೀತನೂ ವಿಮುಕ್ತನೂ ಆದುದರಿಂದ ೨೫೦೦ ವರ್ಷಗಳಿಗೂ ಮೀರಿ ಕೋಟ್ಯಾನುಕೋಟಿ ಜನರ ಹೃನ್ಮನಗಳಲ್ಲಿ ಚಿರಸ್ಥಾಯಿಯಾಗಿ ನೆಲೆಸಿದ್ದಾನೆ. ಆದುದರಿಂದ ಬುದ್ಧ ತನ್ನ ಚಿಂತೆ ತಾನು ಮಾಡಿಕೊಳ್ಳಬಲ್ಲ. ಆತ ಸಮರ್ಥ.

ಧರ್ಮ ಸಹಿಷ್ಣುತೆ, ಧರ್ಮ ಸಮನ್ವಯ, ಪ್ರಾಚ್ಯವಸ್ತುಗಳ ಸಂಬಂಧದ ಅಂತರರಾಷ್ಟ್ರೀಯ ಒಪ್ಪಂದ, ರಾಷ್ಟ್ರಗಳ ಸಹಜೀವನ, ಸಭ್ಯತೆ, ಸಾಂಸ್ಕೃತಿಕ ಜೀವನ ವಿಧಾನ ಮುಂತಾದ ಉನ್ನತ ಮೌಲ್ಯಗಳನ್ನು ತಾಲಿಬಾನ್ ತುಳಿದುಹಾಕಿದೆ ಮತ್ತು ತನ್ನ ಧಾರ್ಮಿಕ ಗ್ರಂಥಕ್ಕೂ ಅಪಮಾನವೆಸಗಿದೆ. ಅಷ್ಟೇ ಅಲ್ಲ ಅವೆಲ್ಲಕ್ಕೂ ಮಿಗಿಲಾಗಿ, ಅನ್ಯ ಮತಧರ್ಮಗಳಲ್ಲಿರುವ ಮತಾಂಧರನ್ನು ಕೆರಳಿಸಿ ಅವರ ಕೈ ಬಲಪಡಿಸಿದೆ. ಸೇಡಿಗೆ ಸೇಡಿನ ನೀತಿ ಹೆಚ್ಚು ಬಲಿಷ್ಠವಾಗಿ ಕಾರ್ಯಾಚರಣೆಯ ತತ್ವವಾಗುವಂತೆ ಇಡೀ ಪರಿಸ್ಥಿತಿಯನ್ನೇ ಮಾರ್ಪಡಿಸಿದೆ. ಅಫ್ಘಾನಿಸ್ಥಾನದೊಳಗೇ ಉದಾರಚರಿತರೂ, ಪರಮತ ಸಹಿಷ್ಣುಗಳೂ, ತಮ್ಮ ಸಭ್ಯತೆ-ಸಂಸ್ಕೃತಿ ಮತ್ತು ಪೂರ್ವೇತಿಹಾಸದ ಬಗೆಗೆ ಪೂಜ್ಯ ಭಾವವಿಟ್ಟವರೂ, ಹೆಮ್ಮೆಪಡುವವರೂ ಇದ್ದಾರೆ. ಅಂಥವರ ಬಾಯಿಗೆ

ತಾಲಿಬಾನ್ ಬೀಗವುದ್ದೆ, ಹಾಕಿ ಅವರನ್ನು ಅವಮಾನಕ್ಕೆ ಗುರಿಪಡಿಸಿ ತುಳಿದಿಟ್ಟಂತಾಯಿತು. ಕೊನೆಗೆ ಅಂತಾರಾಷ್ಟ್ರೀಯ ಅಭಿಮತವನ್ನು ದುರ್ಲಕ್ಷಿಸಿದ ಆರೋಪಕ್ಕೂ ತುತ್ತಾಯಿತು. ಇದೇನೆ ತಾಲಿಬಾನ್ ಸಾಧನೆ ?

ತಮ್ಮ ತಮ್ಮ ಧರ್ಮವನ್ನು ಹರಡುವ ತೀವ್ರ ಹಪ್ಹಾಸದಲ್ಲಿ ತೊಡಗಿರುವ ಇವರಿಗೆ ಶುದ್ಧ–ಅಶುದ್ಧ, ಧರ್ಮ–ಅಧರ್ಮ, ಫೇರ್–ಫೌಲ್‌ಗಳ ಮಧ್ಯೆ ಇರುವ ಭೇದ ರೇಖೆ ಮಾಯವಾಗಿಬಿಡುತ್ತದೋ ಏನೋ ? ಗಾಂಧಿಯವರ ಸರ್ವಧರ್ಮ ಸಮಾನದಂಥ ವಿಚಾರ ಇಂಥವರ ಗಂಟಲಿನಲ್ಲಿ ಹೇಗೆ ಇಳಿಯಬೇಕು ? ಇಂಥವರು ತಮ್ಮ ಧರ್ಮ ಗ್ರಂಥಗಳನ್ನೇ ಆಗಲೀ, ಅನ್ಯಧರ್ಮ ಗ್ರಂಥಗಳನ್ನೇ ಆಗಲಿ ಹೇಗೆ ವ್ಯಾಖ್ಯಾನಿಸುತ್ತಾರೆ? ಬರೇ ಶಬ್ದಾರ್ಥ, ಮೇಲಮೇಲಣ ಅರ್ಥ ಹಚ್ಚಿ ವ್ಯಾಖ್ಯಾನಿಸಬಲ್ಲರೇ ಹೊರತು ಬೇರೆ ಏನೂ ಮಾಡಲಾರರು. ಡನ್ ಶಾಮ್ಯುಯಲ್ ಪಿ. ಹಂಟಿಂಗ್ ಅವರು ಮುಂಬರುವ ಯುದ್ಧವು ಸಭ್ಯತೆಗಳ ನಡುವೆ ನಡೆಯುವ ಯುದ್ಧವೆಂದು ಬಣ್ಣಿಸಿದ್ದು ಜ್ಞಾಪಕಕ್ಕೆ ಬರುತ್ತದೆ. ಜಗತ್ತು ಭವಿಷ್ಯದಲ್ಲಿ ೭–೮ ಬಹುಮುಖ್ಯ ಸಭ್ಯತೆಗಳ ಪಾರಸ್ಪರಿಕ ಪ್ರಭಾವ, ವರ್ತನೆ ಮತ್ತು ಅವುಗಳಿಂದುಂಟಾಗುವ ಪರಿಣಾಮಗಳಿಂದ ಬಹುಮಟ್ಟಿಗೆ ರೂಪಿಸಲ್ಪಡುತ್ತದೆ ಎಂದು ನುಡಿದಿದ್ದರು.

ಹಂಟಿಂಗ್‌ಡನ್ ಅವರ ಭವಿಷ್ಯವಾಣಿಯಂತೆ ಮುಂದೆ ನಡೆಯುವ ವಿಶ್ವಯುದ್ಧ ಸಭ್ಯತೆಗಳ ಸಂಗ್ರಾಮವಾಗಿ ಬದಲಾಗುವುದಾದರೆ ಅದಕ್ಕೆ ಕಾರಣಗಳನ್ನು ಹುಡುಕಿಕೊಂಡುಹೋಗಬೇಕಾಗಿಲ್ಲ. ತಾಲಿಬಾನ್‌ನಂಥ ಧರ್ಮಾಂಧರು ಬಹು ಸುಲಭವಾಗಿ ಧರ್ಮೋನ್ಮಾದದಲ್ಲಿ ತೇಲಿ ಹೋಗುವಂಥವರು ಬೇಕಾದ ಕಾರಣಗಳನ್ನು ಒದಗಿಸುವವರಿದ್ದಾರೆ. ಧಾರ್ಮಿಕ ಸಂಕೇತಗಳು, ಕರ್ಮಕಾಂಡದ ಸಂಗತಿಗಳು, ಧರ್ಮಗ್ರಂಥಗಳ ಶಬ್ದಾರ್ಥಗಳು ಮುಂತಾದವನ್ನೇ ನಿಜವಾದ ಧರ್ಮವೆಂದು ಭ್ರಮಿಸುವುದರಿಂದ ಸಭ್ಯತೆಗಳ ಸಂಗ್ರಾಮಕ್ಕೆ ಉರುವಲು ಒದಗುವುದು. ಜೊತೆಗೆ ಪಾಶ್ಚಿಮಾತ್ಯ ಸಭ್ಯತೆಗಳು ತಮ್ಮ ಶೋಷಣೆ, ಮಾರುಕಟ್ಟೆ ಶಕ್ತಿಯ ಹೆಸರಿನಲ್ಲಿ ನುಗ್ಗಿಸುವ ತಮ್ಮ ಜೀವನ ಶೈಲಿಯನ್ನು ಸಹ ಗಣನೆಗೆ ತೆಗೆದುಕೊಳ್ಳಬೇಕು, ತಮ್ಮ ಧಾರ್ಮಿಕ ಮೂಲಭೂತ ಗ್ರಹಿಕೆಗಳನ್ನು ಅನ್ಯರ ಮೇಲೆ ಹೇರುವ ಪ್ರಯತ್ನವನ್ನೂ ಗಣನೆಗೆ ಸೇರಿಸಿಕೊಳ್ಳಬೇಕು. ತನ್ನ ಆರ್ಥಿಕ ಹಿತಾಸಕ್ತಿಗಳನ್ನು ವರ್ಧಿಸಿಕೊಳ್ಳುವ ತನ್ನ ಸೈನಿಕ ಶಕ್ತಿಯ ಪ್ರಾಬಲ್ಯವನ್ನು ಸುರಕ್ಷಿತವಾಗಿ ಅದೇ ಮಟ್ಟದಲ್ಲಿರುವಂತೆ ಇಟ್ಟುಕೊಳ್ಳುವ ಮತ್ತು ಎಲ್ಲಕ್ಕೂ ಮಿಗಿಲಾಗಿ ಅನ್ಯ ಸಭ್ಯತೆಗಳ ನಡುವೆ ಘರ್ಷಣೆಗಳನ್ನು ಹೆಚ್ಚಿಸಿ ಒಡೆದು ಆಳುವನೀತಿಯನ್ನು ಚತುರತೆಯಿಂದ ಬಳ

ಸುವ ಪಾಶ್ಚಾತ್ಯ ಕುತಂತ್ರದಿಂದಾಗಿ ಸಭ್ಯತೆಗಳ ಸಂಗ್ರಾಮ ಸಂಭವಿಸವುದು ತಾಲಿಬಾನ್ ಅದಕ್ಕೆ ತಕ್ಕ ಸಾಧನವಾಗಬಲ್ಲ ಸಂಘಟನೆಯೇ ಸರಿ.

ತಾಲಿಬಾನ್‌ನಂಥ ಸಂಘಟನೆಗಳು ಏನೇ ಮಾಡಲಿ, ನಮ್ಮ ಮೂಲ ನೆಲೆಯನ್ನು ನಾವು ಬಿಡುವಂತಿಲ್ಲ. ಅವರ ನೆಲೆ ಏನೇ ಎಂಥದೇ ಇರಲಿ ಅದು ಬಾಹ್ಯ, ಪ್ರಕಟ ಸಂಕೇತ ಮತ್ತು ಮೇಲು ಮೇಲಣ ವಿಚಾರಗಳನ್ನೇ ಆಧರಿಸಿ ನಿಂತದ್ದು, ಆದರೆ ಗಾಂಧಿ-ವಿನೋಬಾ ಹೇಳುವಂತೆ ನಮ್ಮ ಮೂಲಭೂತ ತಿರುಳಿನಂತಿರುವ ಕೇಂದ್ರ ಭಾಗದ ವಿಚಾರ ಮಾತ್ರ ಸ್ಥಾಯಿಯಾಗಿ ಗಟ್ಟಿಮುಟ್ಟಾಗಿ ಉಳಿದೇಬಿಡುವುದು. ಇದೇ ಗಾಂಧಿ-ವಿನೋಬಾ ನಂಬಿಕೆ. ಹಾಗೆ ನಂಬಲು ಕಾರಣವಿಷ್ಟೇ. ವೈದಿಕ, ಬೌದ್ಧ, ಕ್ರೈಸ್ತ, ಇಸ್ಲಾಂ ಮುಂತಾದ ಜಗತ್ತಿನ ಬಹುಮುಖ್ಯ ಬೃಹತ್ ಮತಧರ್ಮಗಳೆಲ್ಲವೂ ಕೆಲವು ಮೂಲಭೂತ ಸಮಾನಾಂಶಗಳ ಮೇಲೆ ಆಧರಿಸಿ ನಿಂತಿವೆ. ಅವು ಯಾರೂ ಅಲ್ಲಗಳೆಯಲಾರದ ತುಂಡರಿಸಲಾಗದ ಮೂರು ನಾಲ್ಕು ನಂಬಿಕೆಗಳು. ಶಾಶ್ವತ ನೀತಿತತ್ವಗಳಲ್ಲಿ ನಂಬಿಕೆ, ಜೀವಮಾತ್ರದ ಏಕತೆ ಮತ್ತು ಪವಿತ್ರತೆಯಲ್ಲಿ ನಂಬಿಕೆ, ಈ ಮೂರನ್ನೂ ಈ ಎಲ್ಲ ಮತಧರ್ಮಗಳು ದೃಢವಾಗಿ ನಂಬಿವೆ. ತಾಲಿಬಾನ್‌ನಂಥ ಮತಾಂಧರು ಇವೆಲ್ಲ ವಿಚಾರಗಳಿಗೆ ಹಾನಿ ತರಲಾರರು. ಹೆಚ್ಚೆಂದರೆ ಅವರು ಬುದ್ಧನ ಪ್ರತಿಮೆಗಳನ್ನು ಧ್ವಂಸ ಮಾಡಬಹುದು. ಆದರೆ ಬುದ್ಧನ ವಿಚಾರವನ್ನು ನಾಶ ಮಾಡಲಾರರು. ಅದು ಅವರ ಶಕ್ತಿಗೆ ಮೀರಿದ ವಿಷಯ. ಅದು ಯಾರಿಂದಲೂ ಸಾಧ್ಯವಿಲ್ಲ. ಮತ್ತೊಂದು ದೃಷ್ಟಿ ಸಭ್ಯತೆಗಳು ತೀರ ಸಮೀಪಕ್ಕೆ ಬಂದಾಗ ಸಂಘರ್ಷವಷ್ಟೇ ನಡೆಯುವುದಿಲ್ಲ. ತೀವ್ರತರ ಪಾರಸ್ಪರಿಕ ವಿಚಾರವಿನಿಮಯವೂ ನಡೆಯುತ್ತದೆ. ವೈಚಾರಿಕ ಸಾಮ್ಯತೆ ಕಂಡುಕೊಳ್ಳುವ ಪ್ರಯಾಸವೂ ನಡೆಯುವುದು. ಅದು ತಾಲಿಬಾನ್ ಮಟ್ಟದಲ್ಲಲ್ಲ, ವಿಚಾರವಂತ ಜಿಜ್ಞಾಸುಗಳ, ಅಭ್ಯಾಸುಗಳ ಮಟ್ಟದಲ್ಲಿ ನಡೆಯುವುದು. ಧಾರ್ಮಿಕ ಮಟ್ಟದಲ್ಲೂ ಅಲ್ಲ. ಆಧ್ಯಾತ್ಮಿಕ ಮಟ್ಟದಲ್ಲಿ ನಡೆಯುವುದು ಆಗ ಅದರ ಫಲಿತಾಂಶ ಸತ್ಪರಿಣಾಮ ಗಾಂಧಿ ವಿನೋಬಾ ಧರ್ಮ ಸಮನ್ವಯವೇ. ಈ ಸಿದ್ಧಾಂತಕ್ಕಿಷ್ಟು ಭದ್ರವಾದ ನೆಲೆಗಟ್ಟಿದೆ. ★

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಂತರ್ಜಾತೀಯ ವಿವಾಹದ ಪ್ರತಿಮೆಗಳು

--ಡಾ|| ಕೆ. ಕೇಶವಶರ್ಮ

ಮದುವೆ ಎನ್ನುವುದು ಒಂದು ಗಂಡು ಒಂದು ಹೆಣ್ಣಿನ ಸಂಬಂಧವಾದರೂ ಈ ಸಂಬಂಧದಲ್ಲಿ ಸಾಂಸ್ಕೃತಿಕ ಅಂಶಗಳೂ ಸೇರ್ಪಡೆಗೊಂಡಿವೆ. ಮದುವೆ ಈ ಅರ್ಥದಲ್ಲಿ ಒಂದು ಭಾವನಾತ್ಮಕ ಪ್ರಕ್ರಿಯೆ. ಪರಸ್ಪರ ಮನಸ್ಸುಗಳ ಜೋಡಣೆ ಎನ್ನುವುದು ನಿರ್ದಿಷ್ಟ ಚಾರಿತ್ರಿಕ ಸಂದರ್ಭದ ಮನೋಗತ ಅಭಿಪ್ರಾಯಗಳ ದ್ಯೋತಕವಾಗಿರುತ್ತದೆ. ವಸಾಹತುಶಾಹಿ ಅನುಭವದ ಅನಂತರದಲ್ಲಿ ನಮ್ಮೆಲ್ಲರ ಯೋಚನಾ ಕ್ರಮ ಬದಲಾಯಿತು. ಈ ರೀತಿ ಸಾಮಾಜಿಕ ಪ್ರಕ್ರಿಯೆಗೆ ಅನ್ವಯಿಸಿಕೊಂಡೇ ನಾವು ಮದುವೆಯ ಬಗ್ಗೆ ಮಾತನಾಡುತ್ತಿದ್ದೇವೆ. ವಸಾಹತುಶಾಹಿ ಅನುಭವ ಸಾಂಪ್ರದಾಯಿಕ ಸಮಾಜಕ್ಕೆ ಮತ್ತು ಹೊಸ ಸಮಾಜದ ನಡುವೆ ಒಂದು ಬಿರುಕನ್ನು ತಂದುಕೊಟ್ಟಿದೆ. ಈ ಬಿರುಕೇ ಅನೇಕ ಸಾಂಸ್ಕೃತಿಕ ಸಂಬಂಧಗಳ ನಡುವೆ ನಿರ್ದಿಷ್ಟ ವೈಚಾರಿಕ ಪ್ರಣಾಳಿಕೆಯನ್ನು ರೂಪಿಸಿಕೊಟ್ಟಿತು. ಈಗಂತೂ ಬ್ರಾಹ್ಮಣನೊಬ್ಬ ಚಪ್ಪಲಿ ಅಂಗಡಿ ಇಡುತ್ತಾನೆ. ಬಾರ್‌ನಲ್ಲಿ ಕೆಲಸ ಮಾಡುತ್ತಾನೆ. ಶೂದ್ರಾತಿಶೂದ್ರನೊಬ್ಬ ಶಿಕ್ಷಕನಾಗುತ್ತಾನೆ. ಜಮೀನ್ದಾರಿ ಪದ್ಧತಿಯಲ್ಲಿ ಹೇಳಿಕೊಟ್ಟ ಕಸುಬುಗಳಲ್ಲಿ ಬ್ರಾಹ್ಮಣ ಹುಡುಗನೊಬ್ಬ ಐಗಳ ಮಠದಲ್ಲಿ ಪಾಠ ಮಾಡುವ ಕನಸು ಕಾಣುವಂತಿಲ್ಲ. ಈಗಿನ ಸಂದರ್ಭ ಹೇಗಿದೆ ಎಂದರೆ ಶಿಕ್ಷಕ ವೃತ್ತಿಯಲ್ಲಿರುವ ಕೆಳಜಾತಿಯ ಹುಡುಗನೊಬ್ಬನನ್ನು ಆತನ ಪಾಠಕ್ಕಾಗಿಯೋ ವ್ಯಕ್ತಿತ್ವಕ್ಕಾಗಿಯೋ ಮೇಲ್ಜಾತಿ ಹುಡುಗಿಯೊಬ್ಬಳು ಪ್ರೇಮಿಸಿ ಮದುವೆಯಾಗುತ್ತಾಳೆ. ಹಾಗೆಯೇ ಚಪ್ಪಲಿ ಅಂಗಡಿಯಿಟ್ಟ ಬ್ರಾಹ್ಮಣ ಹುಡುಗನೊಬ್ಬ ತನ್ನ ಸಂಪರ್ಕದ ದೆಸೆಯಿಂದಾಗಿ ಬೇರೆ ಜಾತಿಯ ಹುಡುಗಿಯನ್ನು ಮದುವೆಯಾಗುವ ಸಾಧ್ಯತೆ ಇದೆ. ಈ ಮಾತುಗಳನ್ನು ಹೇಳುವುದಕ್ಕೆ ಕಾರಣ ಇಷ್ಟೆ: ಉತ್ಪಾದನಾ ಸಂಬಂಧಗಳ ಬದಲಾವಣೆಯು ನಮ್ಮ ಮಾನಸಿಕ ವ್ಯಾಪಾರಗಳನ್ನು ಬದಲಾಯಿಸುತ್ತಲೂ ಹೋಗುತ್ತದೆ ಮತ್ತು ಅದರಿಂದಾಗಿ ಸ್ವಾತಂತ್ರ್ಯ, ಸಮಾನತೆ ಮೊದಲಾದ ಆಕರ್ಷಕ ಪದಗಳನ್ನು ಸಾಂಪ್ರದಾಯಿಕ ಸಮಾಜವನ್ನು ಭೇದಿಸುವುದಕ್ಕಾಗಿ ಬಳಸಿಕೊಳ್ಳುತ್ತೇವೆ. ನಾಗರಿಕ ಜಗತ್ತಿನ ಪರಿಕಲ್ಪನೆಯಲ್ಲಿ ಜಾತಿ ಎನ್ನುವುದು ಒಂದು ರೀತಿಯ ಭ್ರಮಾತ್ಮಕ ಕಲ್ಪನೆ ಮಾತ್ರ. ಅಂತರಜಾತಿ ಒಳಗಿನ ಸಂಬಂಧಗಳು ಈ ಕಾರಣದಿಂದ ಆಧುನಿಕ ನಾಗರಿಕ ಜಗತ್ತಿನಲ್ಲಿ ಸಾಧ್ಯ. ನಾಗರಿಕ ಜಗತ್ತು ಈ ರೀತಿಯ ಅನೇಕ ವ್ಯಾಮೋಹಗಳನ್ನು ತನ್ನ ಬಸಿರಲ್ಲಿ ಇಟ್ಟುಕೊಳ್ಳುತ್ತದೆ. ಸಾಂಪ್ರದಾಯಿಕ

ಸಮಾಜವನ್ನು ಛೇದಿಸುವುದಕ್ಕೆ ಅಂತರಜಾತಿಗಳ ಒಳಗಣ ಸಂಬಂಧವು ಒಂದು ಆಂತರಿಕ ವೃತ್ತಿ ಮಾತ್ರ.

ಮದುವೆಯ ಬಗೆಗೆ ಸಾಂಪ್ರದಾಯಿಕ ಸಮಾಜದಲ್ಲಿ ಕೊಟ್ಟ ಮಾದರಿ ಆಧುನಿಕ ಜೀವನ ಕ್ರಮಕ್ಕೆ ತೀರವಾಗಿ ಲಗತ್ತಾಗುವುದಿಲ್ಲ. ಮದುವೆಯಂತಹ ಒಂದು ಸಂಸ್ಥೆಯನ್ನು ಕುರಿತು ನಾವು ಹೇಗೆ ವ್ಯಾಖ್ಯಾನಿಸುತ್ತೇವೆ ಅನ್ನುವುದರ ಮೇಲೆ ತಾತ್ವಿಕ ಪ್ರಶ್ನೆಗಳು ಅಡಕಗೊಂಡಿವೆ. ಅಂತರಜಾತಿ ವಿವಾಹಗಳನ್ನು ಕ್ರಾಂತಿಯ ಬಹಳ ದೊಡ್ಡ ಹುನ್ನಾರಗಳೆಂದು ಸುಲಭವಾಗಿ ವೈಭವೀಕರಿಸಿ ಬಿಡಬಹುದು ಅಥವಾ ಅಂತರಜಾತಿ ವಿವಾಹವಾದವರು ತಾವು ಶ್ರೇಷ್ಠ ಪ್ರಗತಿ ಪರ ವಿಚಾರಧಾರೆಗಳ ಪ್ರವರ್ತಕರೆಂದು ಉದ್ಘೋಷಿಸಿಬಿಡಬಹುದು. ಇದಕ್ಕೂ ಸ್ವಲ್ಪ ರಿಯಾಯ್ತಿ ದರದಲ್ಲಿ ಸಿಕ್ಕುವ ಖಾದಿ ಪರಟನ್ನು ಹೊಲಿಸಿಕೊಂಡು ತಾನೊಬ್ಬ ಕ್ರಾಂತಿಕಾರಿ ಎಂದು ಹೇಳಿಕೊಳ್ಳುವುದಕ್ಕೂ ಬಹಳ ವ್ಯತ್ಯಾಸವೇನೂ ಕಾಣುವುದಿಲ್ಲ. ಅಂತರಜಾತಿ ವಿವಾಹವಾಗುವವರು ಯಾರು, ಯಾವ ಸಂದರ್ಭ ದಲ್ಲಿ, ಹೇಗೆ ಮದುವೆಯಾಗುತ್ತಾರೆ ಎನ್ನುವುದರಿಂದಷ್ಟೇ ಕೆಲವು ತೀರ್ಮಾನ ಗಳನ್ನು ನಾವು ಮಾಡಬಹುದು. ಈಗಾಗಲೇ ಹೇಳಲಾಗಿರುವಂತೆ ಚಾರಿತ್ರಿಕ ಬದಲಾವಣೆ ಎನ್ನುವುದು ನಮ್ಮೆಲ್ಲ ಆಯ್ಕೆಗಳನ್ನು ಬದಲಾಯಿಸುತ್ತಾ ಹೋಗು ತ್ತವೆ. ಮೌಲ್ಯಗಳ ಸ್ವರೂಪವನ್ನು ನಿರ್ಧರಿಸುತ್ತದೆ. ಜಮೀನ್ದಾರಿ ಪದ್ಧತಿಯ ಉತ್ಪಾದನಾ ಕ್ರಮಗಳಿಂದ ಆಧುನಿಕ ಉತ್ಪಾ ದನಾ ಕ್ರಮಗಳ ಕಡೆಗೆ ಪಲ್ಲಟಗೊಂಡಾಗ ನಮ್ಮೆಲ್ಲರ ಜೀವನ ಕ್ರಮ ದಲ್ಲೂ ಅನೇಕ ಪಲ್ಲಟಗಳು ಉಂಟಾದವು. ಮಾರುಕಟ್ಟೆ ಸಂಸ್ಕೃತಿಯ ಕಡೆಗೆ ಸಮಾಜವೊಂದು ಜಿಗಿದಾಗ "ಮದುವೆ" ಪ್ರತ್ಯೇಕವಾಗಿ ಉಳಿಯಲು ಸಾಧ್ಯ ವಿಲ್ಲ. ಮದುವೆಯೂ ಒಂದು ನಿರುದ್ದೇಶವಾದ ಪ್ರಕ್ರಿಯೆ ಅಲ್ಲ. ನಮಗೆಲ್ಲ ಗೊತ್ತಿರುವಂತೆಯೇ ಯಾರೂ "ನಾನು ಸುಮ್ಮನೆ ಮದುವೆಯಾದೆ" ಎನ್ನುವುದಿಲ್ಲ. ಕುಟುಂಬ ಸ್ವರೂಪದ ಆಧುನಿಕ ವ್ಯಾಖ್ಯಾನ ಉತ್ಪಾದನೆ ಸಂಬಂಧಗಳನ್ನು ಅಳವಡಿಸಿಕೊಂಡಿದೆ. ಕುಟುಂಬದಲ್ಲಿಯೂ ವಿಸ್ತೃತ ಅರ್ಥದಲ್ಲಿ ಮದುವೆಯಲ್ಲಿಯೂ, ಯಾರು ಯಾರನ್ನು ಆಳುತ್ತಾರೆ ಎಂಬುದಷ್ಟೇ ಮುಖ್ಯವಾಗಿರುತ್ತದೆ.

...ಹುಟ್ಟಿಗೆ ಮತ್ತು ಮದುವೆಗೆ ಸಂಬಂಧ ಕಲ್ಪಿಸಿರುವುದನ್ನು 'ಮುಸ್ಸಂ ಜೆಯ ಕಥಾ ಪ್ರಸಂಗ'ದಲ್ಲಿ ಮಮ್ತಾಜ್ ಮತ್ತು ಉಡುಪರ ಬಗೆಗಿನ ಪ್ರತಿಕ್ರಿಯೆಯಲ್ಲಿ ಕಾಣಬಹುದು. 'ಉಡುಪ ಬ್ರಾಹ್ಮಣ, ಅವನ ಹೆಂಡತಿ ತುರುಕರವಳು. ಅವರಿಬ್ಬರು ದಂಪತಿಗಳು ಎನ್ನುವುದೇ ಸೋಜಿಗದ ವಿಷಯ ವಾಗಿದ್ದ ರಂಗಪ್ಪನಿಗೆ ಆ ವಿಚಿತ್ರ ಗಂಡು ಹೆಣ್ಣನ್ನು ಮನೆಯಲ್ಲಿ ಎಲ್ಲಿಸು

ವುದು ಮತ್ತು ಅವರಿಗೆ ಎಲ್ಲಿ ಯಾತರಲ್ಲಿ ಉಣ್ಣಲು ನೀಡುವುದು ಇತ್ಯಾದಿ ಪ್ರಶ್ನೆಗಳು ಎದುರಾದವು. ಅದಕ್ಕಿಂತ ಹೆಚ್ಚಾಗಿ ಆ ಇಬ್ಬರೊಡನೆ ಹ್ಯಾಗೆ ಮಾತನಾಡುವುದು ಎಂಬ ದಿಗಿಲು ಅವಳಲ್ಲಿತ್ತು' (ಮುಸ್ಸಂಜೆಯ ಕಥಾಪ್ರಸಂಗ, ಪು. ೧೬೧) ನಗರದಿಂದ ಬಂದ ಉಡುಪನ ಬಗೆಗೆ ರಂಗವ್ವನ ಆತಂಕವು ಸಹಜ ವಾದುದು. ತನ್ನ ಜಾತಿಗಿಂತ ಭಿನ್ನವಾದ ಮಂಜನ ಜೊತೆಗೆ ತನ್ನ ಮಗಳ ಮದುವೆಯನ್ನು ನೆರವೇರಿಸುವುದಕ್ಕೆ ರಂಗವ್ವನು ಒಪ್ಪುವುದಿಲ್ಲ. ಇಡೀ ಪ್ರಕರಣ ದಲ್ಲಿ ಕೆಲವು ರೀತಿಯ ಆತಂಕಗಳು ಕೆಲಸ ಮಾಡಿವೆ. ಸಾಂಪ್ರದಾಯಿಕ ಮದುವೆ ಯನ್ನು ಇಡೀ ಸಮಾಜವು ಶ್ರೇಷ್ಠವಾದುದೆಂದು ನಂಬುತ್ತದೆ. ಇದಕ್ಕೆ ಕಾರಣ ವೆಂದರೆ ಪ್ರತಿಯೊಂದು ಜಾತಿಯ ಮೂಲದಲ್ಲಿ ನಿರ್ದಿಷ್ಟವಾದ ಅಹಂಕಾರ ವೊಂದರ ಮೂಲಕ ತನ್ನ ಜಾತಿಯನ್ನು ಕಾಪಾಡಿಕೊಳ್ಳುವ ಪ್ರಯತ್ನವನ್ನು ಮಾಡಲೆತ್ನಿಸುತ್ತದೆ. ಆದರೆ ಒಮ್ಮೆ ಈ ರೀತಿಯ ಅಂತರಜಾತಿಯ ವಿವಾಹ ಜರುಗಿಬಿಟ್ಟರೆ ಅನಂತರದಲ್ಲಿ ಸಮಾಜವು ಅದನ್ನು ಒಪ್ಪಿಕೊಂಡುಬಿಡುತ್ತದೆ. ಉದಾಹರಣೆಗೆ 'ಭುಜಂಗಯ್ಯನ ದಶಾವತಾರ'ದಲ್ಲಿ ಭುಜಂಗಯ್ಯ ಲಿಂಗಾಯತ ನಾದರೂ ಎರಡನೆಯ ಮದುವೆಯನ್ನು ಬಳೆ ಮಾರುವ ಸುಶೀಲೆಯ ಜೊತೆ ಆಗುತ್ತಾನೆ. ಈ ಮದುವೆ ದೇವಸ್ಥಾನದಲ್ಲಿ ಜರುಗುತ್ತದೆ. ಈ ಕಾದಂಬರಿ ಯಲ್ಲಿ ವಚನ ಪರಂಪರೆಯ ಬಗೆಗೂ ಪ್ರತಿಕ್ರಿಯೆಯಿದೆ. ಹಾಗೆಯೇ ಇದು ಜರುಗುವುದು. ದೇವಸ್ಥಾನದಲ್ಲಿ. ಈ ಮದುವೆಯು ತನ್ನ ಸಿಂಧುತ್ವವನ್ನು ಹೀಗೆ ಪಡೆದುಕೊಂಡಿದೆ. ದೇವಸ್ಥಾನದಲ್ಲಿ ಜರುಗುವ ಮದುವೆಯು ಆಧುನಿಕ ಹಿಂದೂ ಮ್ಯಾರೇಜ್ ಆಕ್ಟ್‌ನ ಪ್ರಕಾರ ಸಮ್ಮತವಾದುದು.

...ದೇಸಾಯಿಯವರ ಕಾದಂಬರಿಗಳಲ್ಲಿ ನಡೆಯುವ ದಾಂಪತ್ಯ ಜೀವನದ ಚೌಕಟ್ಟು ಅಂತರಜಾತಿಯ ವಿವರಗಳನ್ನು ಒಳಗೊಂಡಿದೆ. ದೇಸಾಯಿಯವರ ಕಾದಂಬರಿ ಗಳ ಜಗತ್ತು ನಿಂತಿರುವುದು ಆಧುನಿಕ ನಗರಗಳಲ್ಲಿ. ಆಧುನಿಕ ನಗರ ಜಗತ್ತು ಸೃಷ್ಟಿಸುವ ಸಂಬಂಧಗಳು ದೇಸಾಯಿಯವರಿಗೆ ಮುಖ್ಯವಾಗಿವೆ. ಸಾಂಸ್ಕೃತಿಕ ಪಲ್ಲಟದ ಹಿನ್ನೆಲೆಯಲ್ಲಿ ವಿವಾಹಗಳು ನಡೆಯುವುದರಿಂದ ಹಳ್ಳಿಯ ಜೀವನ ಕ್ರಮದಲ್ಲಿ ಜರುಗುವ ಮೇಲುಕೀಳು ಸಂಬಂಧಗಳು ಇಲ್ಲಿ ಮುಖ್ಯವಲ್ಲ. ದೇಸಾಯಿ ಯವರು ಹಳ್ಳಿಗಿಂತ ಭಿನ್ನವಾದ ಪರಿಸರವು ನಗರದಲ್ಲಿದೆ ಎಂದು ಕಾದಂಬರಿ ಗಳಲ್ಲಿ ಸೂಚಿಸಿದ್ದಾರೆ. ಆದರೆ ದೇಸಾಯಿಯವರ ಕಾದಂಬರಿಯಲ್ಲಿ ಬರುವ ಪಾತ್ರ ಗಳಲ್ಲಿ ಹೆಚ್ಚಿನವು ಇಂಗ್ಲಿಷ್ ಶಿಕ್ಷಣ ಕ್ರಮಕ್ಕೆ ತೆರೆದುಕೊಂಡವು. ಅಷ್ಟೇ ಅಲ್ಲ, ಮೇಲು ಮಧ್ಯಮ ವರ್ಗದ ಅನುಭವವನ್ನು ಒಳಗೊಂಡಿರುವುವು. ಹಾಗಾಗಿ ತೀರಾ ಸಹಜವಾಗಿಯೇ ದೇಸಾಯಿಯವರ ಕಾದಂಬರಿಗಳಲ್ಲಿ ಅಂತರಜಾತಿಯ

ವಿವಾಹಗಳು ಜರುಗುತ್ತವೆ. ಸಮಾಜ ಶಾಸ್ತ್ರಜ್ಞರ ಅಭಿಪ್ರಾಯವೊಂದನ್ನು ಸೂಚಿಸಬಹುದಾದರೆ, ಆಧುನಿಕತೆಯ ಪ್ರಭಾವ, ನಗರ ಜೀವನ ಕ್ರಮ, ಜನ ಸಂಖ್ಯೆಯ ಹೆಚ್ಚಳ, ಅಂತರ್ಜಾತಿಯ ವಿವಾಹಕ್ಕೆ ಒಪ್ಪಿಗೆಯನ್ನು ನೀಡುತ್ತದೆ. ಹಾಗೆಯೇ ಆಧುನಿಕತೆಯ ಪ್ರವೇಶದಿಂದ ಜಾತಿ ಸಂಬಂಧಗಳು ಶಿಥಿಲಗೊಳ್ಳು ತ್ತವೆ. ದೇಸಾಯಿಯವರ ಕಾದಂಬರಿಗಳು ಇವನ್ನು ಸೂಚಿಸುತ್ತವೆ.

ಈಚಿನ ಕೆಲವು ಕೃತಿಗಳಲ್ಲಿ ಮೇಲುಜಾತಿಯ ಚರಿತ್ರೆಗಳನ್ನು ಒಡೆಯುವು ದಕ್ಕೆ ಅಂತರಜಾತಿಯ ವಿವಾಹಗಳು ಸಹಕರಿಸಬಲ್ಲವು ಎನ್ನುವ ಗ್ರಹಿಕೆಗಳಿವೆ. ತೇಜಸ್ವಿಯವರ 'ಚಿದಂಬರ ರಹಸ್ಯ'ದಲ್ಲಿ ರಫಿ ಮತ್ತು ಜಯಂತಿಯವರ ಸಂಬಂಧ ಈ ರೀತಿಯ ಪ್ರಶ್ನೆಗಳನ್ನು ಎತ್ತುತ್ತದೆ.

ಈಗ ಆಧುನಿಕ ಕನ್ನಡ ಸಾಹಿತ್ಯದ ಮುಖಾಂತರ ಹರಿದುಬಂದ ಅಂತರ ಜಾತಿಯ ವಿವಾಹದ ಪರಿಕಲ್ಪನೆಗಳನ್ನು ಕುರಿತು ಚರ್ಚಿಸಬಹುದು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಂತರಜಾತಿಯ ವಿವಾಹವನ್ನು ಆದರ್ಶೀಕೃತ ಮೌಲ್ಯವಾಗಿ ಗ್ರಹಿಸಲಾ ಗಿದೆ. ಬಹುತೇಕ ಕೃತಿಗಳಲ್ಲಿ ಅಂತರಜಾತಿಯ ವಿವಾಹವೆಂಬುದನ್ನು ಒಂದು ತಾಂತ್ರಿಕ ನಿಲುವಾಗಿ ಗ್ರಹಿಸಲಾಗಿದೆ. ಅಂತರಜಾತಿಯ ವಿವಾಹವು ಆಧುನಿಕ ಕನ್ನಡದ ಪ್ರಾತಿನಿಧಿಕ ಪ್ರತಿಕ್ರಿಯೆಯ ಪ್ರಕಾರ ಸಾಂಪ್ರದಾಯಿಕ ಸಮಾಜವನ್ನು ಪ್ರಶ್ನಿಸ ಬಲ್ಲದು. ಅಂತರಜಾತಿಯ ವಿವಾಹವನ್ನು ನಾವು ಹೇಗೆ ವ್ಯಾಖ್ಯಾನಿಸಬಲ್ಲೆವು ಎಂಬುದರ ಮೇಲೆ ಮಾತ್ರ ಚರ್ಚೆ ಸಾಧ್ಯ. ಆಧುನಿಕ ಕನ್ನಡ ಸಾಹಿತ್ಯವು ಹುಟ್ಟಿರುವುದು ಪರಿವರ್ತನೆಗೊಳ್ಳುತ್ತಿರುವ ಆಧುನಿಕ ಸಮಾಜದಲ್ಲಿ. ಸಾಂಪ್ರ ದಾಯಿಕ ಮಾದರಿಯನ್ನು ಮೀರಿದ ಸಾಮಾಜಿಕ ಸನ್ನಿವೇಶವಿದು. ಈ ಆಧುನಿಕ ಸಮಾಜದಲ್ಲಿ ಆಧುನಿಕತೆಗೂ, ಸಾಂಪ್ರದಾಯಿಕತೆಗೂ ಒಂದು ರೀತಿಯಿಂದ ನಿರ್ದಿಷ್ಟರೂಪದ ಸಂಘರ್ಷವಿದೆ. ಈ ಸಂಘರ್ಷದ ಅಂತಿಮ ನಿಲುವು ವ್ಯಕ್ತ ವಾಗುವುದು ಅಧಿಕಾರದ ವ್ಯಾಖ್ಯಾನದಲ್ಲಿ; ಆಸ್ತಿ, ಕುಟುಂಬ, ಜಾತಿ, ಪಾವಿತ್ರ್ಯ ಇತ್ಯಾದಿ ಅಂಗಗಳಿಗೆ ಅತ್ಯಂತ ನಿರ್ಣಾಯಕವಾದ ಸಂಬಂಧವಿದೆ. ಇವುಗಳ ನಡುವಣ ತಲ್ಲಣವನ್ನು ಆಧುನಿಕ ಕನ್ನಡದ ಕೆಲವೇ ಬರಹಗಾರರು ವಿವರಿಸುವ ಪ್ರಯತ್ನ ಮಾಡಿದ್ದಾರೆ. ಕಾರಂತರ, ಲಂಕೇಶರ ಕಾದಂಬರಿಗಳಲ್ಲಿ ಇವುಗಳ ಸಂಕೀರ್ಣ ಸಂಬಂಧದ ವಿವರಗಳಿವೆ,

ಕನ್ನಡದ ನವೋದಯ ಸಾಹಿತ್ಯದ ಸಂದರ್ಭದಲ್ಲಿ ಅಂತರಜಾತಿಯ ವಿವಾಹವನ್ನು ವಿವರಿಸುವಾಗ 'ಆದರ್ಶವಾದಿ' ಸಾಮಾಜಿಕ ಪ್ರತಿಕ್ರಿಯೆಯ ರೀತಿಯಲ್ಲಿ ಹೇಳಲಾಗಿದೆ. ಆದರೆ ಆಯ್ಕೆಯ ಸಂದರ್ಭದಲ್ಲಿ ಗೊರೂರು ಅವರು

೩೨ ನೇ ಪುಟ ನೋಡಿ

ವಿಚಾರ ದೀಪ್ತಿ........

"ಸತ್ಯವನ್ನು ಸಂಘಟಿಸಲು ಸಾಧ್ಯವಿಲ್ಲ. ಏಕೆಂದರೆ ಅದಕ್ಕೆ ಮಿತಿ ಇಲ್ಲ, ಬಂಧನವಿಲ್ಲ; ಯಾವುದೇ ಮಾರ್ಗದಿಂದ ಅದನ್ನು ತಲುಪಲು ಸಾಧ್ಯವಿಲ್ಲ. ಸತ್ಯವನ್ನು ಸಂಘಟಿಸಿದಲ್ಲಿ ಅದು ಸಾಯುತ್ತದೆ. ಅದೊಂದು ಮತವೂ, ಪಂಥವೂ ಆಗಿ ಒತ್ತಾಯ ಪೂರ್ವಕ ಅನುಸರಿಸಬೇಕಾದ ಧರ್ಮವಾಗುತ್ತದೆ.

ಒಮ್ಮೆ ಭೂತ ಮತ್ತು ಅದರ ಗೆಳೆಯ ಇಬ್ಬರೂ ಭೂಮಿಯ ಕಡೆಗೆ ನಡೆದಿದ್ದರು. ಆಗ ಒಬ್ಬ ಮನುಷ್ಯ ಬಾಗಿ ಹೊಳೆಯುವ ವಸ್ತುವೊಂದನ್ನು ಕೈಗೆತ್ತಿಕೊಂಡು ಹರ್ಷದಿಂದ ನೋಡಿದ. ಅದರಿಂದ ತುಂಬ ಪ್ರಭಾವಿತಗೊಂಡ ಆತ ಅದನ್ನು ತನ್ನ ಜೇಬಿನಲ್ಲಿ ಹಾಕಿಕೊಂಡ.

ಆಗ ಗೆಳೆಯನು ಭೂತವನ್ನು ಕೇಳಿದ, "ಆ ಮನುಷ್ಯ ಆಯ್ದುಕೊಂಡದ್ದೇನನ್ನು?"

"ಸತ್ಯದ ತುಣುಕು ಅದು", ಭೂತ ಉತ್ತರಿಸಿತು.

"ಹಾಗಾದರೆ, ನಿನಗೆ ಅನಿಷ್ಟ ಕಾದಿದೆ!" ಗೆಳೆಯ ಉದ್ಗರಿಸಿದ.

'ಓ! ಹಾಗೇನು ಅಲ್ಲ. ನಾನು ಸತ್ಯವನ್ನು ಒಂದು ಸಂಸ್ಥೆಯನ್ನಾಗಿ ಸಂಘಟಿಸುವಂತೆ ಅವನಿಗೆ ಪ್ರಚೋದಿಸುತ್ತೇನೆ "ಎಂದು ಭೂತ ಉತ್ತರಿಸಿತು.

ಯಾವುದೇ ಧರ್ಮ ಸಂಘಟಿತವಾದರೆ ಅದು ಮೂಢ ನಂಬಿಗೆಯದು, ಯಾಂತ್ರಿಕ ಆಚರಣೆಯದು ಆಗಿ ಸತ್ಯದಿಂದ ದೂರಾಗಿ ಬಿಡುತ್ತದೆ.

– ಜೆ. ಕೃಷ್ಣಮೂರ್ತಿ

ಬೌದ್ಧ ಸಂಸ್ಕೃತಿಯಲ್ಲಿ ಮಹಿಳೆಯರ ಸ್ಥಾನಮಾನ

-ಮಂಗ್ಳೂರು ವಿಜಯ

ಕ್ರಿ.ಶ. ಪೂರ್ವದಲ್ಲಿ ಹಲವು ನೂರು ವರ್ಷಗಳ ಹಿಂದೆ ಮಹಾಪ್ರಜಾ ಎಂಬ ಮಹಿಳೆ ಉತ್ತರ ಭಾರತದಲ್ಲಿ ಸಾಮಾಜಿಕ ಮತ್ತು ಆಧ್ಯಾತ್ಮಿಕ ಕ್ರಾಂತಿಯ ಜ್ಯೋತಿಯನ್ನು ಹೊತ್ತು ಮುನ್ನಡೆದಿದ್ದಳು. ಆಕೆ ನೂರಾರು ಮೈಲು ದೂರವನ್ನು ಕಾಲ್ನಡಿಗೆಯಲ್ಲಿ ನಡೆದು ಶಾಕ್ಯಮುನಿ ಬುದ್ಧನ ಬಳಿ ಬಂದು "ನಿನ್ನ ಭಿಕ್ಷು ಸಂಘದಲ್ಲಿ ಮಹಿಳೆಯರಿಗೆ ಯಾವ ಸ್ಥಾನವಿದೆ?" ಎಂದು ನೇರವಾಗಿ ಸರಳವಾಗಿ ಪ್ರಶ್ನಿಸಿದ್ದಳು.

ಆಕೆಯೊಂದಿಗೆ ಹಲವು ದಿನಗಳ ಕಾಲ ಚರ್ಚೆ ನಡೆಸಿದ ಬಳಿಕ "ಸಂಘದಲ್ಲಿ ಭಿಕ್ಷುಣಿಯರಿಗೂ ಸಮಾನ ಅವಕಾಶವಿದೆ; ಅವರೂ ಭಿಕ್ಷುಗಳು ನಡೆಯುವ ದಾರಿಯಲ್ಲಿ ನಡೆಯಬಹುದಾಗಿದೆ; ಬುದ್ಧ, ಧರ್ಮ ಮತ್ತು ಸಂಘ ಮಾರ್ಗದಲ್ಲಿ ಅವರೂ ಸಹವರ್ತಿಗಳು" ಎಂಬುದಾಗಿ ಬುದ್ಧ ಸ್ಪಷ್ಟಪಡಿಸಿದ. ಆ ಕಾಲದ ಸಮಾಜ ವ್ಯವಸ್ಥೆಯು ತನ್ನ ಬೋಧನೆಯನ್ನು ಅಳವಡಿಸಿಕೊಳ್ಳಬೇಕೆಂದು ಸಾರಿದ.

ಮಹಾಪ್ರಜಾ ಎಂಬ ಮಹಿಳೆ ಭೇಟಿಯಾಗುವ ಮುನ್ನ ಬುದ್ಧ ಕೂಡ ಈ ಬಗ್ಗೆ ವಿಚಾರ ಮಾಡಿರಲಿಲ್ಲ ಎಂದು ಹೇಳಲಾಗುತ್ತದೆ; ಬುದ್ಧಪೂರ್ವಕಾಲದಲ್ಲಿ ಮಹಿಳೆಯರಿಗೆ ಇದ್ದ ಎರಡನೇ ಸ್ಥಾನದ ಬಗ್ಗೆ ಬುದ್ಧನ ಗಮನ ಹೋಗಿರಲಿಲ್ಲವೆಂದು ಇದರಿಂದ ಸ್ಪಷ್ಟವಾಗುತ್ತದೆ. ಆದರೆ, ಬುದ್ಧ ಈ ಬಗ್ಗೆ ತನ್ನ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿದ ನಂತರವೂ ಆ ಕಾಲದ ಸಮಾಜವ್ಯವಸ್ಥೆಯಲ್ಲಿ (ಬೌದ್ಧ ಸಮಾಜದಲ್ಲೂ) ಮಹಿಳೆಯರಿಗೆ ಸಮಾನ ಸ್ಥಾನಮಾನ ಲಭಿಸಲಿಲ್ಲ.

ಬುದ್ಧ ಗತಿಸಿದ ಕೆಲಕಾಲದ ವರೆಗಷ್ಟೆ ಆತನ ಬೋಧನೆಯ ಪ್ರಭಾವ ಕೊಂಚಮಟ್ಟಿಗೆ ಬೌದ್ಧ ಸಮಾಜದಲ್ಲಿತ್ತು; ಆದರೆ ನಂತರ ಬೌದ್ಧ ಸಮಾಜ ಕೂಡ ತನ್ನ ಹಿಂದಿನ ಸ್ಥಿತಿಗೆ ಮರಳಿ ಮಹಿಳೆಗೆ ಎರಡನೇ ಸ್ಥಾನ ನೀಡುವುದನ್ನು ಮುಂದುವರೆಸಿತು. ಈ ವಿಷಯದ ಬಗ್ಗೆ ಅಧ್ಯಯನಕ್ಕೆ ತೊಡಗಿದರೆ, ..."ಮಹಿಳೆಯರಿಗೂ ಕೂಡ ಬೋಧಿ ಪಡೆಯಲು ಸಾಧ್ಯವಿದೆ; ಅವರೂ ಸಮಾನರು; ಅವರಿಗೆ ಎರಡನೇ ಸ್ಥಾನ ನೀಡುವುದು ಅಸಂಬದ್ಧ..." ಎಂಬ ಸಾಹಿತ್ಯ ಲಭ್ಯವಾಗುವ ಹಾಗೆಯೇ ...."ಮಹಿಳೆಯರು ಮಹಾಕಾಮಿಗಳಾದ ಕಾರಣ, ಅವರು ಬೌದ್ಧ ಭಿಕ್ಷುಗಳ ದಾರಿಯಲ್ಲಿನ ಅಪಾಯಕರ ಜೀವಿಗಳು...." ಎಂಬ ಸಾಹಿತ್ಯ ಕೂಡ ಲಭ್ಯವಾಗುತ್ತದೆ.

ಕಳೆದ ಎರಡೂವರೆ ಸಾವಿರ ವರ್ಷಗಳ ವಿಶ್ವಾದ ಚರಿತ್ರೆಯನ್ನು ಅಭ್ಯಾಸ

ಮಾಡಿದಾಗ ಅಲ್ಲಿ ಬೌದ್ಧ ಚಿಂತನೆ ಮತ್ತು ರಾಜ್ಯಾಧಿಕಾರಕ್ಕಾಗಿ ನಡೆದ ಹೋರಾಟಗಳ ನಡುವೆ ವಿಶಿಷ್ಟವಾದ ಸಂಬಂಧ ಇರುವುದು ಪ್ರಕಟವಾಗುತ್ತದೆ. ಈ ದೀರ್ಘ ಕಾಲದ ಚರಿತ್ರೆಯಲ್ಲಿ ಧರ್ಮ ಮತ್ತು ರಾಜಕಾರಣ ಎಂಬ ಎರಡು ಬಹುಮುಖ್ಯ ಕ್ಷೇತ್ರಗಳಲ್ಲಿ ಮಹಿಳೆಯರು ನಿರ್ವಹಿಸಿದ ಪಾತ್ರವೇನು ಎಂಬ ಬಗ್ಗೆ ಯಾವುದೇ ವಿವರವಾದ, ಸಮಗ್ರವಾದ ಮಾಹಿತಿ ಲಭ್ಯವಾಗುವುದಿಲ್ಲ. ಹೋರಾಟ ನಡೆಸಿದ ಶಕ್ತಿಗಳು ರಾಜ್ಯಾಧಿಕಾರವನ್ನು ಪಡೆಯುವಲ್ಲಿ ಸಫಲರಾದಾಗ, ಬೌದ್ಧ ಧರ್ಮದ ಮಾನ್ಯತೆಯನ್ನು ಪಡೆದುಕೊಳ್ಳಲು ಶತಾಯ ಗತಾಯ ಹಂಬಲಿಸಿರುವುದು ಸ್ಪಷ್ಟವಾಗುತ್ತದೆ. ಬೌದ್ಧ ಸಂಸ್ಕೃತಿಯಲ್ಲಿ ಮೂಲಭೂತ ಸಂಸ್ಥೆಗಳ ಪೈಕಿ ಒಂದಾದ ಬೌದ್ಧ ಸಂಘದಲ್ಲಿ ಮಹಿಳೆಯರಿಗೆ ಸ್ಥಾನವನ್ನು ನಿರಾಕರಿಸಿರುವುದು ಬೌದ್ಧ ಅವಡಿಸಿಕೊಂಡ ರಾಷ್ಟ್ರಗಳಲ್ಲಿಯೇ ಬರ್ಮಾ, ಕಾಂಬೋಡಿಯಾ, ಸಂಸ್ಕೃತಿಗಳನ್ನು ಲಾವೋಸ್, ಶ್ರೀಲಂಕಾ, ಥಾಯ್ಲೆಂಡ್ ಇತ್ಯಾದಿಗಳಲ್ಲಿ ಕಂಡುಬರುತ್ತದೆ.

ಲಿಂಗಸಮಾನತೆಯ ಬಗ್ಗೆ ಬುದ್ಧನ ಬೋಧನೆ ಏನೇ ಇರಲಿ, ಇಂದೂ ಬೌದ್ಧ ಸಂಸ್ಕೃತಿಗಳಲ್ಲಿ ಮಹಿಳೆಯರಿಗೆ ಎರಡನೇ ಸ್ಥಾನಮಾನ ದೊರಕಿದೆ ಎಂಬುದಂತೂ ನಿರ್ವಿವಾದ. ಇದಕ್ಕೆ ಬುದ್ಧಪೂರ್ವ ಸಮಾಜದಲ್ಲಿದ್ದ ಪುರುಷಾಧಿಪತ್ಯ ವ್ಯವಸ್ಥೆಯೇ ಆಧಾರವಾಗಿರಬಹುದು; ಈ ಅಂಶಕ್ಕೆ ಬುದ್ಧನ ಬೋಧನೆಯ ಬೆಂಬಲ ಇಲ್ಲದೇ ಇರಬಹುದು; ಆದರೆ ಬೌದ್ಧ ರಾಷ್ಟ್ರಗಳಲ್ಲಿ ಮಹಿಳೆಯರನ್ನು ಧಾರ್ಮಿಕ ಕಕ್ಷೆಯ ಹೊರಗೆ ನಿಲ್ಲಿಸಿರುವುದಂತೂ ನಿಚ್ಚಳವಾಗಿ ಕಾಣುವ ಅಂಶ.

ಕೆಲವೊಂದು ಬೌದ್ಧ ಸಂಸ್ಕೃತಿಗಳಲ್ಲಿ ವ್ಯಾಪಾರ–ವಾಣಿಜ್ಯ, ಗೃಹಕೃತ್ಯ ನಿರ್ವಹಣೆ, ವಿದ್ಯೆ, ಸೇನೆ ಇತ್ಯಾದಿ ಕ್ಷೇತ್ರಗಳಲ್ಲಿ ನಿರ್ಣಯಗಳನ್ನು ಕೈಗೊಳ್ಳುವಷ್ಟು ಅಧಿಕಾರವು ಮಹಿಳೆಯರಿಗೆ ಇದ್ದರೂ, ಅವರನ್ನು ಧಾರ್ಮಿಕ ಕ್ಷೇತ್ರದಿಂದ ಮಾತ್ರ ದೂರ ಇಡಲಾಗಿರುವುದು ವಿಶಿಷ್ಟ ಅಂಶದತ್ತ ನಮ್ಮನ್ನು ಸೆಳೆದೊಯ್ಯುತ್ತದೆ. ಇದನ್ನು ಪರಾಮರ್ಶಿಸಿದರೆ, ಆರ್ಥಿಕ ಬಲ ಹೊಂದಿದ ಮಹಿಳೆಯರಿಗಿಂತಲೂ, ಆಧ್ಯಾತ್ಮಿಕ ಬಲ ಹೊಂದಿದ ಮಹಿಳೆಯರಿಂದ ತನ್ನ ಪ್ರಾಬಲ್ಯಕ್ಕೆ ಬಲವಾದ ಪೆಟ್ಟು ಬೀಳುತ್ತದೆ ಎಂದು ಪುರುಷಾಧಿಪತ್ಯ ಸಮಾಜ ವ್ಯವಸ್ಥೆ ಭಾವಿಸಿರುವುದು ಗೊತ್ತಾಗುತ್ತದೆ. ಅಂದರೆ ಧಾರ್ಮಿಕ ಕ್ಷೇತ್ರದಲ್ಲಿ ಲಿಂಗಪ್ರತ್ಯೇಕತೆಯನ್ನು ಕಾಪಾಡಿಕೊಂಡು ಬರಲು ಸಮಾಜ ವ್ಯವಸ್ಥೆ ಬಲು ಎಚ್ಚರ ತೋರಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಎಚ್ಚರಿಕೆಯ ಮೂಲವು ಧಾರ್ಮಿಕ ಕ್ಷೇತ್ರದಲ್ಲಿ ಮಹಿಳೆಗೆ ನಿರ್ಣಯಾಧಿಕಾರ ನಡೆಸುವುದರಿಂದ ಆಕೆಯಲ್ಲಿ ಆತ್ಮಬಲವು ಜಾಗ್ರತವಾಗಿ, ಪುರುಷಾಧಿಪತ್ಯ ಅಧಿಕಾರಹೀನವಾಗಿ ಬಿಡುತ್ತದೆ ಎಂಬ ಆತಂಕದಲ್ಲಿ ಇರುವುದು ಗೋಚರವಾಗುತ್ತದೆ. ಈ ಅಂಶದಿಂದ ಬೌದ್ಧ ಸಂಸ್ಕೃತಿಗಳಲ್ಲಿ ಆರ್ಥಿಕ ಅಂತಸ್ತು

ಹಾಗೂ ಮಾನ್ಯತೆಗಳು ಸರ್ವೋಚ್ಚವಾಗಿತ್ತೆಂಬ ಇನ್ನೂ ಒಂದು ವಿಶಿಷ್ಟ ಸಂಗತಿ ಸ್ಪಷ್ಟವಾಗುತ್ತದೆ.

ಬೌದ್ಧ ಸಂಸ್ಕೃತಿಗಳಲ್ಲಿ ಮಹಿಳೆ ಬಹುತೇಕವಾಗಿ ಅನುವರ್ತಿಯ ಪಾತ್ರವನ್ನೇ ವಹಿಸಿರುವುದು ಕಂಡು ಬರುತ್ತದೆ. ತಾಯಿ/ಪತ್ನಿಯಾಗಿ, ಕುಟುಂಬ ಪೋಷಣೆ, ಭಿಕ್ಷು/ಸಂಘ, ಸೇವೆ, ಮಕ್ಕಳ ಲಾಲನೆ-ಪಾಲನೆ, ಸೂತ್ರಗಳ ಪಠಣ, ಧ್ಯಾನಗಳಲ್ಲಿ ತೊಡಗುವುದೇ ಆಕೆಯ ಪರಮಕರ್ತವ್ಯವಾಗಿರುವುದು ಕಾಣುತ್ತದೆ. ಬುದ್ಧನಿಗೆ ಜ್ಞಾನೋದಯವಾಗುವ ಮುನ್ನ ಕಾಣುವ ಸುಜಾತಾ ಈ ಮಾದರಿಗೆ ಪರಮ ಸಾಕ್ಷ್ಯ. ಈ ಕರ್ತವ್ಯಗಳನ್ನು ನಿರ್ವಹಿಸುತ್ತಲೇ ಸಾಮಾಜಿಕ ಜವಾಬ್ದಾರಿಯನ್ನೂ ನಿರ್ವಹಿಸಿದ ಸಾಕ್ಷ್ಯಕ್ಕಾಗಿ ನಾವು ವಿಶಾಖಾಳನ್ನು ನೋಡಬಹುದು. ನಿಷ್ಕಾಮಪೂರ್ವಕವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದ ಮಹಿಳೆಯರ ಪ್ರತಿನಿಧಿಗಳಾಗಿ ಸದ್ಧರ್ಮರತ್ನಾವಳಿಯಲ್ಲಿ ಬರುವ ಸುಭದ್ರಾಳನ್ನು, ಸುಮನಾಳನ್ನು ನೋಡಬಹುದು. ಹೀಗಿದ್ದರೂ ಬೌದ್ಧ ಸಂಸ್ಕೃತಿಗಳಲ್ಲಿ ಮಹಿಳೆಯರು ಹಲವಾರು ಹಕ್ಕುಗಳನ್ನು ಉದಾ: ವಿಚ್ಛೇದನೆ, ಮರುವಿವಾಹ, ಆಸ್ತಿ ಹಕ್ಕು, ಪುರುಷನನ್ನು ಅವಲಂಬಿಸದೆ ಧರ್ಮಾಚರಣೆ ಇತ್ಯಾದಿ ಹೊಂದಿದ್ದುದೂ ಸ್ಪಷ್ಟವಾಗಿ ಕಾಣುತ್ತದೆ.

ಪತ್ನಿ/ತಾಯಿ ಮಾದರಿಯಲ್ಲದೆ ಬೌದ್ಧ ಸಂಸ್ಕೃತಿಗಳಲ್ಲಿ ಮಹಿಳೆಯರ ಇನ್ನೂ ಎರಡು ಮುಖ್ಯ ಮಾದರಿಗಳು ಕಾಣಬರುತ್ತವೆ. ಅವೆಂದರೆ (೧) ದೈಹಿಕ ಸೌಂದರ್ಯವನ್ನು ಬಳಸಿ ಪುರುಷರನ್ನು ಪ್ರೇಮಿಸಿದ/ಕಾಮಿಸಿದ ವೇಶ್ಯೆಯರು; (೨) ವ್ಯಕ್ತಿಗತ ಜೀವನದಲ್ಲಿ ಅನಿರೀಕ್ಷಿತವಾಗಿ ಘೋರ ಅಪಘಾತವನ್ನು ಅನುಭವಿಸಿ ಧರ್ಮದತ್ತ ಹೊರಳಿದವರು. ಮೊದಲನೇ ವರ್ಗಕ್ಕೆ ಅಸಂಖ್ಯ ಉದಾಹರಣೆಗಳು ಸಿಗುತ್ತವೆ. ಎರಡನೇ ವರ್ಗಕ್ಕೆ ಉದಾಹರಣೆಯಾಗಿ ಕಿಸಾಗೋತಮಿ, ವಾಸಿತ್ತಿ ಪಟಾಚಾರಾ, ಭದ್ದ ಕುಂಡಲಕೇಶಾ ಮುಂತಾದವರನ್ನು ನೋಡಬಹುದು. ಆದರೆ ಬೌದ್ಧ ಸಂಸ್ಕೃತಿಗಳಲ್ಲಿ ಮಹಿಳೆ ಧಾರ್ಮಿಕ ಕ್ಷೇತ್ರದಲ್ಲಿ ಪುರುಷರಿಗೆ ಸರಿಸಮವಾಗಿ ನಿಂತ ಉದಾಹರಣೆ ಮಾತ್ರ ಎಲ್ಲೂ ಕಾಣುವುದಿಲ್ಲ.

ಭಿಕ್ಷುಣಿ ಸಂಘ ಹಾಗೂ ಹೀಗೂ ಅಸ್ತಿತ್ವದಲ್ಲಿದ್ದದ್ದು ಭಾರತ ಮತ್ತು ಶ್ರೀಲಂಕಾದಲ್ಲಿ ಮಾತ್ರ. ಇಲ್ಲೂ ಅದು ಸುಮಾರು ಕ್ರಿ.ಶ. ೧೧ ನೇ ಶತಮಾನಕ್ಕೆ ಕೊನೆಯುಸಿರೆಳೆಯಿತು. ಕಾಂಬೋಡಿಯಾ, ಜಪಾನ್, ಲಾವೋಸ್, ಮಂಗೋಲಿಯಾ, ಥಾಯ್ಲೆಂಡ್ ಮತ್ತು ಟಿಬೆಟ್‌ಗಳಲ್ಲಿ ಭಿಕ್ಷುಣಿ ಸಂಘ ಅಧಿಕೃತವಾಗಿ ಅಸ್ತಿತ್ವಕ್ಕೇ ಬರಲಿಲ್ಲ, ಕ್ರಿ.ಶ. ೫ ನೇ ಶತಮಾನದಲ್ಲಿ ಶ್ರೀಲಂಕಾದ ಮೂಲಕ ಮೊದಲು ಚೀನಾದಲ್ಲಿ ನಂತರ ಕೊರಿಯಾ-ವಿಯೆಟ್ನಾಂಗಳಲ್ಲಿ ಅಸ್ತಿತ್ವಕ್ಕೆ ಬಂದ ಭಿಕ್ಷುಣಿ

ಸಂಘ ಅಲ್ಲಿ ಅಬಾಧಿತವಾಗಿ ಮುಂದುವರೆಯಿತು. ಭಿಕ್ಷುಣಿ ಸಂಘ ಇರುವ ಬೌದ್ಧ ಸಂಸ್ಕೃತಿಗಳಲ್ಲಿ ಮಹಿಳೆಯರಿಗೆ ಬಹುಪಾಲು ಸಮಾನ ಸ್ಥಾನಮಾನ ಲಭ್ಯ ವಾಗಿದ್ದರೆ, ಭಿಕ್ಷುಣಿ ಸಂಘ ಇಲ್ಲದ ಆದರೆ ಶ್ರಮಣೇರಿಕಾ ಎಂಬ ದೀಕ್ಷೆ ಪಡೆ ಯಲು ಅವಕಾಶವಿರುವ ಸಂಸ್ಕೃತಿಗಳಲ್ಲಿ ಮಹಿಳೆಯರಿಗೆ ಸ್ಥಾನಮಾನವಿರಲಿಲ್ಲ, ಆದರೆ ಸಂಘದ ಸದಸ್ಯರಾಗಿ ಪರಿಗಣಿತರಾಗಲು ಅವರಿಗೆ ಅವಕಾಶವನ್ನು ನೀಡಲಾಗಿತ್ತು, ಭಿಕ್ಷುಣಿ ಸಂಘ ಇಲ್ಲದ ಮತ್ತು ಶ್ರಮ ಣೇರಿಕಾ ದೀಕ್ಷೆ ಪಡೆಯಲು ಅವಕಾಶವೂ ಇಲ್ಲದ ಬೌದ್ಧ ಸಂಸ್ಕೃತಿಗಳಲ್ಲಿ ಉದಾ: ಬರ್ಮಾ, ಲಾವೋಸ್, ಕಾಂಬೋಡಿಯಾ, ಶ್ರೀಲಂಕಾ, ಥಾಯ್ಲೆಂಡ್ ಇತ್ಯಾದಿ ಧಾರ್ಮಿಕ ಕ್ಷೇತ್ರದಲ್ಲಿ ಮಹಿಳೆಗೆ ಕೆಳದರ್ಜೆಯ ಸ್ಥಾನಮಾನ ನೀಡಲಾಗಿತ್ತು.

ಬೌದ್ಧ ಧಾರ್ಮಿಕ ವಿಧಿ ವಿಧಾನಗಳನ್ನು, ನೀತಿ ನಿರ್ದೇಶನಗಳನ್ನು, ರೂಢಿ ನಂಬಿಕೆಗಳನ್ನು ಆಧಾರವಾಗಿ ಪರಿಗಣಿಸದೆ ಬುದ್ಧನ ಬೋಧನೆಯ ಸಾರವನ್ನೇ ಆಧಾರವಾಗಿ ಪರಿಶೀಲಿಸಿದರೆ ಬೌದ್ಧ ಸಂಸ್ಕೃತಿಗಳಲ್ಲಿ ವರ್ಣ, ವರ್ಗ. ಜಾತಿ, ಲಿಂಗ, ಪ್ರದೇಶಗಳ ಕಾರಣವಾಗಿ ತಾರತಮ್ಯ ನೀತಿ ಇರಲೇಕೂಡದು, ಆದರೆ ಕಳೆದ ಎರಡೂವರೆ ಸಹಸ್ರ ವರ್ಷಗಳ ವಿಶ್ವದ, ವಿಶೇಷವಾಗಿ ಏಷ್ಯಾದ ಚರಿತ್ರೆಯನ್ನು ಅಭ್ಯಾಸ ಮಾಡಿದರೆ, ಬೌದ್ಧ ಸಂಸ್ಕೃತಿಗಳಲ್ಲೂ ಲಿಂಗ ತಾರತಮ್ಯ ನೀತಿ ಇರುವುದು ಸ್ಪಷ್ಟವಾಗಿ ಕಾಣುತ್ತದೆ. ಬೌದ್ಧ ಸಂಸ್ಕೃತಿಗಳಲ್ಲಿ ಪುರುಷರಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸುತ್ತಾ ಅವರಿಗೆ ಹೆಚ್ಚಿನ ಅಧಿಕಾರ ನೀಡುತ್ತಾ ಬರಲಾಗಿರುವುದು ಕಾಣುತ್ತದೆ.

ಬೌದ್ಧ ಸಂಸ್ಕೃತಿಗಳು ತುಲನಾತ್ಮಕವಾಗಿ ಉತ್ತಮವಾಗಿದ್ದರಷ್ಟೇ ಸಾಲದು. ಅವು ಸಮಗ್ರವಾಗಿ ಮತ್ತು ಪರಿಪೂರ್ಣವಾಗಿ ರೂಪುಗೊಳ್ಳಬೇಕು. ಈ ದಿಕ್ಕಿನಲ್ಲಿ ಬೌದ್ಧ ಸಂಸ್ಕೃತಿಗಳು ಎದುರಿಸಬೇಕಾದ ಅಗ್ನಿ ಪರೀಕ್ಷೆಗಳಲ್ಲಿ "ಲಿಂಗ ತಾರತಮ್ಯ ನೀತಿ ತ್ಯಾಜ್ಯ" ಎಂಬುದೂ ಒಂದಾಗುತ್ತದೆ. ಇಂಥ ಎಲ್ಲಾ ಅಗ್ನಿಪರೀಕ್ಷೆಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ, ತಮ್ಮ ಅನನ್ಯತೆಯನ್ನು ಮೆರೆಯುವ ಅವಕಾಶವನ್ನು ಬೌದ್ಧ ಸಂಸ್ಕೃತಿಗಳು ಸ್ವೀಕರಿಸಲು ಮುಂದಾಗಬೇಕು.

ಬೌದ್ಧ ಧರ್ಮ ಪರಲೋಕದ ಬಗ್ಗೆ ಮಾತಾಡುವ ಧರ್ಮವಲ್ಲ; ಇಹದ ಬಗ್ಗೆ (ಇಹದಲ್ಲಿನ ಅವಕಾಶಗಳು ಮತ್ತು ಅಧಿಕಾರದ ಬಗ್ಗೆ) ಕೂಡ ಅದು ತುಡಿತ ಹೊಂದಿದೆ. ಬೌದ್ಧ ಸಂಸ್ಕೃತಿಗಳು ವಿಶ್ವಾದ್ಯಂತ ಈ ಅಂಶವನ್ನು ತಾತ್ವಿಕವಾಗಿ ಅಷ್ಟೇ ಅಲ್ಲದೇ ವ್ಯವಹಾರದಲ್ಲೂ ಸಾಬೀತುಪಡಿಸಿವೆ. ಬೌದ್ಧ ಸಂಸ್ಕೃತಿಗಳು ವಿಶ್ವಕ್ಕೆ ನೀಡಿದ ಮಹಾಚೇತನಗಳನ್ನು ಭಾರತದ ಬಿ. ಆರ್. ಅಂಬೇಡ್ಕರ್, ಬರ್ಮಾದ ಆಂಗ್‌ಸಾನ್ ಸೂ ಕಿ, ಕಾಂಬೋಡಿಯಾದ ಭಿಕ್ಷು ಮಹಾ

ಘೋಷಾನಂದ, ಶ್ರೀಲಂಕಾದ ಎ.ಟಿ. ಆರ್ಯರತ್ನ, ಥಾಯ್ಲೆಂಡಿನ ಭಿಕ್ಷು ಬುದ್ಧ ದಾಸ ಮತ್ತು ಮಾಯೆಜಿ ಖುನ್ನಿಂಗ್ ಕನಿತಾ ವಿಚ್ಛೆಂಚಾ ರೊಂಯೆ, ವಿಯೆಟ್ನಾಂನ ಥಿಚ್ ನಾಹ್ಟ್ ಹಾಹ್ನ್, ತೈವಾನಿನ ಭಿಕ್ಷುಣಿ ಶೆಂಗ್ಯಾನ್ ಮತ್ತು ಟಿಬೆಟ್‌ನ ೧೪ ನೇ ದಲ್ಯಾ ಲಾಮಾ ತೆಂಜಿನ್ ಗ್ಯಾತ್ಸೋ ಇತ್ಯಾದಿ ಗಮನಿಸಿದರೆ ಈ ವಿಷಯವು ಮನದಟ್ಟಾಗುತ್ತದೆ.

ವಿಶ್ವಾದ್ಯಂತ ಬೌದ್ಧ ಮಹಿಳೆಯರು ಬೌದ್ಧ ಸಂಸ್ಕೃತಿಗಳಲ್ಲಿನ ಲಿಂಗತಾರತಮ್ಯ ನೀತಿಯನ್ನು ಪ್ರಶ್ನಿಸುತ್ತಲೆ ಅಲ್ಲಿನ ಸಮಾಜ ವ್ಯವಸ್ಥೆಯನ್ನು ಮಾನವೀಯಗೊಳಿಸುವ ಪ್ರಯತ್ನ ಮುಂದುವರೆಸಿದ್ದಾರೆ. ತಮ್ಮ ಸಮಾಜ ವ್ಯವಸ್ಥೆಯಲ್ಲಿನ ಅರೆಕೊರೆಗಳ ವಿರುದ್ಧ ದನಿ ಎತ್ತಿದ್ದಾರೆ. ತಮ್ಮ ಸಮಾಜದಲ್ಲಿ ಬದಲಾವಣೆ ತರುವ ಹರಿಕಾರರಾಗಿಯೂ ಅವರು ಕರ್ತವ್ಯ ನಿರ್ವಹಿಸಿದ್ದಾರೆ.

ಬೌದ್ಧ ಮಹಿಳಾ ಚಳುವಳಿಯು ಸಮಾಜಕ್ಕೆ ತಮ್ಮ ಕೊಡುಗೆಯನ್ನು ನೀಡುತ್ತಲೇ ಬೌದ್ಧ ಸಂಸ್ಕೃತಿಯಲ್ಲಿ ತನಗೆ ಸರಿಸಮಾನ ಮನ್ನಣೆಯನ್ನು ಆಗ್ರಹಿಸುತ್ತದೆ. ಬೌದ್ಧ ಧರ್ಮ ಮತ್ತು ಸ್ತ್ರೀವಾದ ಮುಖಾಮುಖಿಯಾಗುವುದರಿಂದ ಬೌದ್ಧ ಧರ್ಮ ಪರಿಪೂರ್ಣತೆ ಪಡೆದುಕೊಳ್ಳಬಹುದಾಗಿದೆ. ★

(ಮುಕ್ತ ಸಮಾಜವಾದಿ ಮಾತುಕತೆ ಸಾಭಾರ)

ಅಂತರ್ಜಾತಿ ವಿವಾಹ ೨೬ ನೇ ಪುಟದಿಂದ

ಅದಕ್ಕೆ ಗಾಂಧಿವಾದಿ ಹಿನ್ನೆಲೆಯಲ್ಲಿ ತಾತ್ವಿಕ ಚೌಕಟ್ಟನ್ನು ರೂಪಿಸಿದ್ದಾರೆ. ಸಾಮಾಜಿಕ ಸಂರಚನೆಯ ಮೇಲೆ ಈ ವಿವಾಹಗಳು ಬೀರುವ ಪರಿಣಾಮವು ಅವರಿಗೆ ಮುಖ್ಯವಾಗಿದೆ.

ನವ್ಯ ಸಾಹಿತ್ಯ ಸಂದರ್ಭದಲ್ಲಿ ಅಂತರಜಾತಿಯ ವಿವಾಹಕ್ಕೆ ಇರುವ ಸಾಮಾಜಿಕ ಆಯಾಮವು ಮುಖ್ಯವಾಗಿಲ್ಲ. ದಲಿತ ಮತ್ತು ಬಂಡಾಯ ಕೃತಿಗಳಲ್ಲಿ ಮತ್ತೆ ಸಾಮಾಜಿಕ ಸಾಂಪ್ರದಾಯಿಕ ಸಂರಚನೆಯನ್ನು ಛೇದಿಸಲು ಅಂತರಜಾತಿಯ ವಿವಾಹದ ಚಿತ್ರಣಗಳಿವೆ. ★

('ಒಲವು' ಪತ್ರಿಕೆಯ ಸಾಭಾರ)

ಜಾಹಿರಾತುದಾರರ ಗಮನಕ್ಕೆ

ಜನಪದ ವಿಚಾರವು ರಾಜ್ಯದ

ವಿಚಾರವಂತರ, ವಿದ್ಯಾರ್ಥಿಗಳ
ಹಾಗೂ
ವಿವಿಧ ಸಂಸ್ಥೆಗಳ
ಬಳಿ ತಲುಪುತ್ತಿದೆ.
ಇದರ ಲಾಭವನ್ನು
ಜಾಹಿರಾತುದಾರರು ಪಡೆಯಬೇಕಾಗಿ ವಿನಂತಿ.

KA-SKMND-470/-2000

Vol 1 Issue 11.

ತೆರದ-ಅಂಚೆ

Janapada Vichara – Kannada Monthly Digest Edited and Printed by Surendra Koulagi at Janapada Seva Trust Printing Press, Melkote on behalf of Janapada Seva Trust, (Regd) Melkote, Dist – Mandya 571 431.

Phone : 08236/58754